# ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959

(ಕರ್ನಾಟಕ ರಾಜ್ಯಪತ್ರ, ಗುರುವಾರ, ಫೆಬ್ರವರಿ 14, 2008, ಭಾಗ – IVಎ, 137 ರಿಂದ 160ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ವಿದ್ಯುಚ್ಛಕ್ತಿ ಚಾರ್ಜುಗಳು, ಮುಂತಾದವುಗಳ ಮೇಲೆ ತೆರಿಗೆ ವಿಧಿಸುವುದು
4. ವಿದ್ಯುಚ್ಛಕ್ತಿ ತೆರಿಗೆಯ ಸಂದಾಯ
5. ಲೆಕ್ಕದ ಪುಸ್ತಕಗಳು, ಇತ್ಯಾದಿ
6. ಪರಿಶೀಲನಾಧಿಕಾರಿಗಳು
7. ವಸೂಲಾತಿಗಳು.
8. ತೆರಿಗೆ ವಿನಾಯಿತಿಗಳನ್ನು ಮತ್ತು ಕಡಿತಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರದ ಅಧಿಕಾರ.

8ಎ. ಕೆಲವು ಕರಾರುಗಳ ನೆರವೇರಿಕೆಯಿಂದ ವಿನಾಯಿತಿ ನೀಡುವುದು.

9. ದಂಡಗಳು.
10. ನಿಯಮ ರಚನಾಧಿಕಾರ.
11. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು
12. ನಿರಸನ ಮತ್ತು ಉಳಿಸುವಿಕೆಗಳು.
13. 1959ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2ರ ನಿರಸನ ಮತ್ತು ಉಳಿಸುವಿಕೆಗಳು.
14. ತೊಂದರೆಗಳ ನಿವಾರಣಾಧಿಕಾರ.

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

I

**1959ರ ಮೂಲ ಅಧಿನಿಯಮ 14.–** ರಾಜ್ಯಗಳ ಪುನರ್ ಸಂಘಟನೆಯಾದಾಗಿನಿಂದ ರಾಜ್ಯದ ಹಲವಾರು ಪ್ರದೇಶಗಳಲ್ಲಿ ವಿವಿಧ ದರದ ವಿದ್ಯುಚ್ಛಕ್ತಿ ಬಳಕೆ ಮೇಲಿನ ತೆರಿಗೆಯು ಜಾರಿಯಲ್ಲಿದೆ ಮತ್ತು ರಾಜ್ಯಾದ್ಯಂತ ಏಕರೂಪ ತೆರಿಗೆ ಪದ್ಧತಿಯನ್ನು ಹೊಂದುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದರೆ ಈ ಏಕರೂಪ ತೆರಿಗೆ ಪದ್ಧತಿಯನ್ನು, ತೆರಿಗೆ ಸ್ವರೂಪವನ್ನು ಏಕರೂಪಕ್ಕೆ ತರುವವರೆಗೆ ಮಾಡಲಾಗಲಿಲ್ಲ. ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು 1959ರ 1ನೇ ಜುಲೈನಿಂದ ಜಾರಿಗೆ ಬರುವಂತೆ ರಾಜ್ಯಾದ್ಯಂತ ಏಕರೂಪ ತೆರಿಗೆ ದರ ಪದ್ಧತಿಯನ್ನು ಜಾರಿಗೊಳಿಸಿತು. ಏಕರೂಪ ತೆರಿಗೆ ಸ್ವರೂಪವನ್ನು ಪ್ರಾರಂಭಿಸುವುದರ ಜೊತೆಗೆ ಏಕಕಾಲದಲ್ಲಿ ಏಕರೂಪದ ತೆರಿಗೆ ದರಗಳನ್ನು ಪ್ರಾರಂಭಿಸುವುದು ಅವಶ್ಯವಾಗಿದ್ದರಿಂದ 1959ರ ಜೂನ್ 23 ರಂದು ಒಂದು ಅಧ್ಯಾದೇಶವನ್ನು ಉದ್ಘೋಷಿಸಲಾಯಿತು. ಈ ಅಧ್ಯಾದೇಶವು ಮೈಸೂರು ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ಅಧಿನಿಯಮ, 1957ರಿಂದ ತಿದ್ದುಪಡಿಯಾದ 1950ರ ಮೈಸೂರು ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮದ ಕ್ರಮದಲ್ಲಿಯೇ ಸಾಮಾನ್ಯವಾಗಿ ಇದೆ.

ಪ್ರಸ್ತುತ ವಿಧೇಯಕವು ಅಧ್ಯಾದೇಶವನ್ನು ಪ್ರತಿಸ್ಥಾಪಿಸುವ ಉದ್ದೇಶ ಹೊಂದಿದೆ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ, ದಿನಾಂಕ: 4ನೇ ಆಗಸ್ಟ್, 1959, ಸಂ.65 ರಲ್ಲಿ ಪ್ರಕಟವಾಗಿದೆ.)

**II**

**1970ರ ತಿದ್ದುಪಡಿ ಮಾಡುವ ಅಧಿನಿಯಮ 10.–** 1959ರ ಮೈಸೂರು ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮದ 3ನೇ ಪ್ರಕರಣವು, ಬೇರೆ ಬೇರೆ ವರ್ಗಗಳ ಬಳಕೆದಾರರ ಸಂಬಂಧದಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ವಿದ್ಯುತ್ತಿನ ಪ್ರತಿ ಯೂನಿಟ್‌ಗೆ ಮೂರು ಪೈಸೆಯನ್ನು ಮೀರದ ದರದಲ್ಲಿ ಲೆಕ್ಕ ಹಾಕಲಾದ ಪ್ರತಿ ತಿಂಗಳು ಬಳಸಿದ ವಿದ್ಯುಚ್ಛಕ್ತಿ ಯೂನಿಟ್‌ಗಳ ಮೇಲೆ ತೆರಿಗೆ ವಿಧಿಸಲು ಉಪಬಂಧ ಕಲ್ಪಿಸುತ್ತದೆ. ಈಗ ವಿದ್ಯುಚ್ಛಕ್ತಿ ಬಳಕೆಯ ಮೇಲೆ ಸರ್ಕಾರವು ವಿಧಿಸಬಹುದಾದ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾವಿಸಲಾಗಿದೆ. ಈಗ ಬೇರೆ ಬೇರೆ ವರ್ಗದ ಬಳಕೆದಾರರಿಗೆ ವಿಧಿಸಲಾಗುವ ತೆರಿಗೆಯೂ ಸೇರಿದಂತೆ, ಒಟ್ಟು ದರವು, ಇತರ ರಾಜ್ಯಗಳಲ್ಲಿರುವ ದರಗಳಿಗಿಂತ ಕಡಿಮೆ ಇದೆ ಮತ್ತು ನಾಲ್ಕನೇ ಯೋಜನೆಗೆ ಸರ್ಕಾರದ ಪಾಲಿನ ವೆಚ್ಚವನ್ನು ಭರಿಸಲು ಸಂಪನ್ಮೂಲವನ್ನು ಸಂಗ್ರಹಿಸುವುದೂ ಸಹ ಅವಶ್ಯವಾಗಿದೆ. ಈ ಪ್ರಸ್ತಾವವನ್ನು ಜಾರಿಗೊಳಿಸುವ ಸಲುವಾಗಿ, ಅಧಿನಿಯಮದ 3ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV–2ಎ, ದಿನಾಂಕ 28ನೇ ಮಾರ್ಚ್ 1970ರಲ್ಲಿ ಸಂಖ್ಯೆ 110 ಎಂದು ಪುಟ 3 ರಲ್ಲಿ ಪ್ರಕಟವಾಗಿದೆ.)

### III

**1979ರ ತಿದ್ದುಪಡಿ ಮಾಡುವ ಅಧಿನಿಯಮ 10.–** ವಿದ್ಯುಚ್ಛಕ್ತಿ ತೆರಿಗೆಯ ವಿಳಂಬಿತ ಸಂದಾಯದ ಮೇಲಿನ ಬಡ್ಡಿಯ ದರವು,ವರ್ಷಕ್ಕೆ ಶೇ. 12 ಕ್ಕಿಂತ ಹೆಚ್ಚಿರಲಿಲ್ಲ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬಾಕಿ ಇದ್ದ ವಿದ್ಯುಚ್ಛಕ್ತಿ ವೆಚ್ಚಗಳ ವಿಳಂಬಿತ ಸಂದಾಯದ ಮೇಲೆ ಬಡ್ಡಿಯ ದರವನ್ನು 1972ರಲ್ಲಿ ಶೇ.12 ರಿಂದ ಶೇ.15ಕ್ಕೆ ಹೆಚ್ಚಿಸಲಾಗಿತ್ತು. ಎರಡೂ ಬಡ್ಡಿ ದರಗಳಲ್ಲಿನ ವ್ಯತ್ಯಾಸವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೇಡಿಕೆ ಹೆಚ್ಚಿಸುವಲ್ಲಿ ಮತ್ತು ಲೆಕ್ಕಗಳನ್ನು ನಿರ್ವಹಿಸುವಲ್ಲಿ ಸ್ವಲ್ಪ ಮಟ್ಟಿನ ಗೊಂದಲಕ್ಕೆ ದಾರಿ ಮಾಡಿಕೊಟ್ಟಿತ್ತು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎತ್ತಿ ತೋರಿಸಿದ ಈ ತೊಂದರೆಯಿಂದ ಪಾರಾಗಲು, ವಿಳಂಬಿತ ವಿದ್ಯುಚ್ಛಕ್ತಿ ತೆರಿಗೆ ಸಂದಾಯದ ಮೇಲಿನ ಬಡ್ಡಿಯ ದರವನ್ನೂ ಸಹ ಶೇ. 12ರಿಂದ ಶೇ. 15ಕ್ಕೆ ಹೆಚ್ಚಿಸಲು ಪ್ರಸ್ತಾವಿಸಲಾಯಿತು.

ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿರುವುದರಿಂದ ಅಧ್ಯಾದೇಶವನ್ನು ಸದರಿ ಉದ್ದೇಶಕ್ಕಾಗಿ ಘೋಷಿಸಲಾಯಿತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿಗೆ ಆಗಿದೆ.

ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV– 2ಎ ದಿನಾಂಕ 24ನೇ ಜನವರಿ 1978, ಸಂ.81 ಆಗಿ ಪು.3 ರಲ್ಲಿ ಪ್ರಕಟವಾಗಿದೆ.

### IV

**1982ರ ತಿದ್ದುಪಡಿ ಮಾಡುವ ಅಧಿನಿಯಮ 5.–** ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ ಮೇರೆಗೆ ತೆರಿಗೆಯನ್ನು ವಸೂಲು ಮಾಡುವುದು ಮತ್ತು ಸಂದಾಯ ಮಾಡುವುದು ಲೈಸೆನ್ಸ್‌ದಾರನ ಹೊಣೆಯಾಗಿದ್ದು, ಅವನು ಈಗ ಪ್ರತಿ ಬಳಕೆದಾರನಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಮೂದುಗಳನ್ನು ಅಗತ್ಯವಾಗಿ ಇಡಬೇಕು. ಲೆಕ್ಕದ ವಿಧಾನವನ್ನು ಸರಳಗೊಳಿಸುವ ಉದ್ದೇಶದಿಂದ ಲೈಸೆನ್ಸ್‌ದಾರನು, ಅವನ ಲೆಕ್ಕಪತ್ರಗಳಲ್ಲಿ ಬಳಸಲಾದ ಒಟ್ಟು ವಿದ್ಯುಚ್ಛಕ್ತಿಯ ಯೂನಿಟ್ ಗಳನ್ನು ಮತ್ತು ಅವನು ಬಳಕೆದಾರರಿಗೆ ಸರಬರಾಜು ಮಾಡಿದ ಯೂನಿಟ್‌ಗಳನ್ನು ಮತ್ತು ಅದರ ಮೇಲೆ ಸಂದಾಯವಾಗತಕ್ಕ ತೆರಿಗೆಯನ್ನು ಮಾತ್ರ ತೋರಿಸಬಹುದು. ತೆರಿಗೆ ಬಾಕಿಗಳ ಮೇಲಿನ ಗರಿಷ್ಠ ಬಡ್ಡಿ ದರವನ್ನು ಶೇ.15 ರಿಂದ ಶೇ. 24ಕ್ಕೆ ಹೆಚ್ಚಿಸಲೂ ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ IV– 2ಎ ದಿನಾಂಕ 3ನೇ ಫೆಬ್ರವರಿ 1982, ಸಂ.73 ಎಂದು ಪು.4 ರಲ್ಲಿ ಪ್ರಕಟವಾಗಿದೆ.)

### V

**1984ರ ತಿದ್ದುಪಡಿ ಮಾಡುವ ಅಧಿನಿಯಮ 25.–** ಈ ರಾಜ್ಯದಲ್ಲಿನ ಬೇರೆ ಬೇರೆ ವರ್ಗಗಳ ಬಳಕೆದಾರರಿಗೆ ವಿಧಿಸುವ ತೆರಿಗೆಯೂ ಸೇರಿ ಒಟ್ಟು ದರವು, ಕೆಲವು ಅಕ್ಕ ಪಕ್ಕದ ರಾಜ್ಯಗಳಿಗಿಂತ ಕಡಿಮೆ ಇದ್ದು, ಆರನೇ

ಯೋಜನೆಗೆ ಸರ್ಕಾರದ ಖರ್ಚಿನ ಪಾಲನ್ನು ಭರಿಸಲು ಹೆಚ್ಚುವರಿ ಸಂಪನ್ಮೂಲವನ್ನು ಸಂಗ್ರಹಿಸುವುದು ಅವಶ್ಯವಾಗಿದೆ.

ಆದ್ದರಿಂದ ಸರ್ಕಾರವು, ವಿದ್ಯುಚ್ಛಕ್ತಿ ಬಳಕೆಯ ಮೇಲೆ ವಿಧಿಸುವ ತೆರಿಗೆಯ ಹೆಚ್ಚಿನ ಮಿತಿಯನ್ನು ಪ್ರತಿ ಯೂನಿಟ್ ವಿದ್ಯುತ್ತಿಗೆ ಆರು ಪೈಸೆಯಿಂದ ಎಂಟು ಪೈಸೆಗೆ ಹೆಚ್ಚಿಸಲು 1959ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮದ 3ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1984ರ ವಿ.ಸ.ವಿಧೇಯಕ ಸಂ. 6 ರಿಂದ ಪಡೆಯಲಾಗಿದೆ.)

VI

**1985ರ ತಿದ್ದುಪಡಿ ಮಾಡುವ ಅಧಿನಿಯಮ 15.–** ಭಾರತ ಸರ್ಕಾರವು, 1ನೇ ಅಕ್ಟೋಬರ್ 1984ರಿಂದ ಜಾರಿಗೆ ಬರುವಂತೆ ವಿದ್ಯುಚ್ಛಕ್ತಿಯ ಮೇಲಿನ ಕೇಂದ್ರ ಉತ್ಪಾದನಾ ಸುಂಕವನ್ನು ರದ್ದುಗೊಳಿಸಿದೆ. ಉತ್ಪಾದನಾ ಸುಂಕದ ವರಮಾನವನ್ನು ಕೇಂದ್ರ ಸರ್ಕಾರವು ಸಂಪೂರ್ಣವಾಗಿ ರಾಜ್ಯ ಸರ್ಕಾರಕ್ಕೆ ವರ್ಗಾಯಿಸುತ್ತಿತ್ತು. ವಿದ್ಯುಚ್ಛಕ್ತಿಯ ಮೇಲೆ ಉತ್ಪಾದನಾ ಸುಂಕವನ್ನು ರದ್ದುಗೊಳಿಸಿದ ಕಾರಣ ರಾಜ್ಯ ಸರ್ಕಾರಕ್ಕೆ ಉಂಟಾಗುವ ನಷ್ಟವನ್ನು ಭರಿಸುವ ಸಲುವಾಗಿ, ಅದರಿಂದ ಉಂಟಾದ ನಷ್ಟವನ್ನು ನಿವಾರಿಸಲು 1ನೇ ಅಕ್ಟೋಬರ್ 1984ರಿಂದ ಜಾರಿಗೆ ಬರುವಂತೆ ವಿದ್ಯುಚ್ಛಕ್ತಿ ತೆರಿಗೆಯನ್ನು ಹೆಚ್ಚಿಸಲಾಗಿದೆ.

ವಿಷಯವು ತುರ್ತು ಸ್ವರೂಪದಾಗಿದ್ದುದರಿಂದ, ಮತ್ತು ವಿಧಾನ ಸಭೆಯು ಅಧಿವೇಶನದಲ್ಲಿಲ್ಲದಿದ್ದುದರಿಂದ, ವಿದ್ಯುಚ್ಛಕ್ತಿ ತೆರಿಗೆಯನ್ನು 8 ಪೈಸೆಯಿಂದ 12 ಪೈಸೆಗೆ ಹೆಚ್ಚಿಸುವುದಕ್ಕೆ ಉಪಬಂಧ ಕಲ್ಪಿಸಲು ಒಂದು ಅಧ್ಯಾದೇಶವನ್ನು ಉದ್ಘೋಷಿಸಲಾಯಿತು.

ಈ ವಿಧೇಯಕವು, ಸದರಿ ಅಧ್ಯಾದೇಶವನ್ನು ಪುನಸ್ಥಾಪಿಸುತ್ತದೆ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ)ಯಲ್ಲಿ ದಿನಾಂಕ 25ನೇ ಮಾರ್ಚ್ 1985ರ ಸಂಖ್ಯೆ 164 ಎಂದು ಪುಟ 3 ರಲ್ಲಿ ಪ್ರಕಟಿಸಲಾಗಿದೆ.)

**VII**

**1990ರ ತಿದ್ದುಪಡಿ ಮಾಡುವ ಅಧಿನಿಯಮ 13.–** ಸ್ಪರ್ಧಾತ್ಮಕವಾಗಿರುವ ಉತ್ಪನ್ನಗಳನ್ನು ನೀಡುವ ಮೂಲಕ ನಮ್ಮ ರಾಜ್ಯಕ್ಕೆ ಕೈಗಾರಿಕೆಗಳನ್ನು ಆಕರ್ಷಿಸಲು, ವಿಶೇಷ ಒಪ್ಪಂದಗಳಿಗೆ ಬರಲಾಯಿತು. ಅವು ತೀರಾ ಅಲ್ಪ ಪ್ರಮಾಣದ ರಿಯಾಯಿತಿ ತೆರಿಗೆ ದರಗಳನ್ನು ಮತ್ತು ಸಾಂದರ್ಭಿಕವಾಗಿ ಬಳಕೆದಾರನಿಂದ ವಸೂಲಿ ಮಾಡಲಾದ ತೆರಿಗೆಯ ಭಾಗವನ್ನು ತುಂಬಿಕೊಡಲು ಅವಕಾಶ ಒದಗಿಸಿದವು.

ಕೆಲವು ಕಾಲದ ಹಿಂದೆ, ನಮ್ಮ ರಾಜ್ಯವು ತೀವ್ರ ವಿದ್ಯುತ್ ಕೊರತೆಯನ್ನು ಅನುಭವಿಸಿತು. ಬಹಳ ದುಬಾರಿ ದರಗಳಲ್ಲಿ ಇತರ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಆಮದು ಮಾಡಿಕೊಳ್ಳುವ ಅವಶ್ಯಕತೆಯೂ ಇತ್ತು, ಉತ್ಪಾದನೆ, ಪ್ರಸರಣ ಹಾಗೂ ಓವರ್ ಹೆಡ್ ವೆಚ್ಚಗಳೂ ಸಹ ಗಣನೀಯವಾಗಿ ಹೆಚ್ಚಿದವು.

ಸ್ಪರ್ಧಾತ್ಮಕವಾದ ಉತ್ಪನ್ನಗಳನ್ನು ನೀಡುವ ಉದ್ದೇಶಕ್ಕಾಗಿ ರಿಯಾಯಿತಿಗಳನ್ನು ನಿರೀಕ್ಷಿಸುವುದರ ಬದಲು, ಕೈಗಾರಿಕೆಗಳು ಬಳಕೆದಾರರಿಗೆ ಉತ್ಪನ್ನಗಳ ಸೌಲಭ್ಯಗಳನ್ನು ಒದಗಿಸುವುದನ್ನು ಕಡೆಗಣಿಸಿದವು. ಉತ್ಪನ್ನದ ಬಳಕೆದಾರನ ವೆಚ್ಚದಲ್ಲಿ ಅವರ (ಕೈಗಾರಿಕೆಗಳ) ನ್ಯಾಯಯುತವಲ್ಲದ ಅಭಿವೃದ್ಧಿಗೆ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಹಾನಿಕರ ರೀತಿಯಲ್ಲಿ ಇದು ಪರಿಣಮಿಸಿತು.

ಪರಿಸ್ಥಿತಿಗೆ ಪರಿಹಾರ ತರುವ ಸಲುವಾಗಿ, ವಿದ್ಯುಚ್ಛಕ್ತಿ ಪೂರೈಕೆ ಅಧಿನಿಯಮ, 1948ರ 49ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಉದ್ದೇಶಕ್ಕಾಗಿ 1981ರ ವಿದ್ಯುಚ್ಛಕ್ತಿ ಪೂರೈಕೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಧಿನಿಯಮಿತಿಗೊಳಿಸಲಾಯಿತು.

ಈ ಅಧಿನಿಯಮಿತಿಯು, ಏಕರೂಪದ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ನೀಡುವುದಲ್ಲದೆ ಕೆಲವು ದರಗಳಲ್ಲಿ ಮೇಲೆ ಸಂಗ್ರಹಿಸಲಾದ ತೆರಿಗೆಯನ್ನು ತುಂಬಿಕೊಡುವಂತೆ ಕಂಟ್ರಾಕ್ಟರನಿಂದ ಹೇರಲಾದ ಹೊಣೆಯಿಂದ ರಾಜ್ಯ ಸರ್ಕಾರವು ಮುಕ್ತಗೊಂಡಿದೆ ಎಂದೂ ಅರ್ಥೈಸಲಾಗಿತ್ತು.

ಅಧಿನಿಯಮದ ಸಿಂಧುತ್ವವನ್ನು ಇಂಡಿಯನ್ ಅಲ್ಯುಮಿನಿಯಂ ಕಂಪನಿ ನಿಯಮಿತವು ಉಚ್ಚ ನ್ಯಾಯಾಲಯದಲ್ಲಿ ಅಯಶಸ್ವಿಯಾಗಿ ಪ್ರಶ್ನಿಸಿತು ಮತ್ತು ಅದು ಸಲ್ಲಿಸಿದ ಅಪೀಲು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಉಳಿದಿದೆ. ಆದರೆ, ರಿಟ್ ಅರ್ಜಿ ಸಂ.1981ರ 27361 ಮತ್ತು 27362 ರಲ್ಲಿ ಉಚ್ಚ ನ್ಯಾಯಾಲಯವು, ಮೇಲಿನ ತಿದ್ದುಪಡಿಯು ತೆರಿಗೆ ನಿರ್ಧರಣೆ ಅಧಿನಿಯಮದ ಮೇರೆಗಿನ ತೆರಿಗೆಯನ್ನು ಮಾತ್ರ ಗಮನಿಸಿದೆ, ಹಾಗೂ ಬಳಕೆಯ ಮೇಲೆ ತೆರಿಗೆ ದರದ ಹೆಚ್ಚಳವನ್ನು ತುಂಬಿಕೊಡುವ ಅಥವಾ ನಷ್ಟಭರ್ತಿ ಮಾಡುವ ಕರಾರು ನಿಬಂಧನೆಗಳನ್ನು ಪಾಲಿಸಿಲ್ಲ ಎಂದು ತೀರ್ಪು ನೀಡಿತು. ತುಂಬಿಕೊಡುವ ಅಥವಾ ನಷ್ಟಭರ್ತಿ ಮಾಡುವುದನ್ನು ಶಾಸನಬದ್ಧವಲ್ಲದ ಇತರ ಕಾರಣಗಳಿಗಾಗಿ ನಿರಾಕರಿಸಲಾಗದು ಎಂದೂ ಸಹ ತೀರ್ಪು ನೀಡಿದೆ.

ಬಳಕೆದಾರನ ವೆಚ್ಚದಲ್ಲಿ ಕೈಗಾರಿಕೆಯ ನ್ಯಾಯಯುತವಲ್ಲದ ಅಭಿವೃದ್ಧಿಯನ್ನು ತಡೆಯುವ ಉದ್ದೇಶದಿಂದ ಮತ್ತು ಜನತೆಯ ಹಿತಾಸಕ್ತಿಗಳನ್ನು ಸಂವರ್ಧಿಸಲು ರಾಜ್ಯದ ಸಂಪನ್ಮೂಲಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವನ್ನು ಹಣ ತುಂಬಿಕೊಡುವ ಮತ್ತು ನಷ್ಟ ಭರ್ತಿ ಮಾಡುವ ಹೊಣೆಗಾರಿಕೆಯಿಂದ ತಪ್ಪಿಸಲು ಒಂದು ಶಾಸನಬದ್ಧ ನೆಲೆಯನ್ನು ಒದಗಿಸುವ ಉದ್ದೇಶವನ್ನು ಪ್ರಸ್ತಾವಿತ ಕಾನೂನು ಹೊಂದಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರದ (ವಿಶೇಷ ಸಂಚಿಕೆ) ಭಾಗ– IV– 2ಎ, ದಿನಾಂಕ 29ನೇ ಮಾರ್ಚ್ 1990ರ ಸಂ.157 ಎಂದು, ಪು. 66 ಮತ್ತು 67 ರಲ್ಲಿ ಪ್ರಕಟಿಸಲಾಗಿದೆ.)

## VIII

**1998ರ ತಿದ್ದುಪಡಿ ಮಾಡುವ ಅಧಿನಿಯಮ 7.–** ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ 4ನೇ ಪ್ರಕರಣವು, ಪ್ರತಿಯೊಬ್ಬ ಲೈಸೆನ್ಸ್ ದಾರನು, ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆಯನ್ನು ವಸೂಲು ಮಾಡಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಲು

ಅಗತ್ಯಪಡಿಸುತ್ತದೆ. ಆದರೆ, ಈ ಅಗತ್ಯತೆಯು 5 ಕಿ.ವಾ.ಸಾಮರ್ಥ್ಯಕ್ಕಿಂತ ಹೆಚ್ಚಿಲ್ಲದ ಜನರೇಟರುಗಳಿಂದ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿ ಬಳಕೆಗೆ ಅನ್ವಯವಾಗುವುದಿಲ್ಲ.

1995ರಲ್ಲಿ 47 ಎ ನಿಯಮವನ್ನು 1956ರ ಭಾರತೀಯ ವಿದ್ಯುಚ್ಛಕ್ತಿ ನಿಯಮಗಳಲ್ಲಿ ಸೇರಿಸಲಾಯಿತು. ಅದು ಪ್ರತಿಯೊಬ್ಬ ಬಳಕೆದಾರ ಅಥವಾ ಅಧಿಭೋಗದಾರನು 10 ಕಿ.ವಾ.ಗಳಿಗಿಂತ ಹೆಚ್ಚಿನ ಸಾಮರ್ಥ್ಯವಿರುವ ವಿದ್ಯುತ್ ಉತ್ಪಾದನಾ ಸ್ಥಾವರವನ್ನು ಕಾರ್ಯಾರಂಭ ಮಾಡುವ ಮೊದಲು ಇನ್ಸ್‌ಪೆಕ್ಟರನ ಲಿಖಿತ ಅನುಮೋದನೆಯನ್ನು ಪಡೆಯಲು ಅಗತ್ಯಪಡಿಸುತ್ತದೆ.

ಭಾರತೀಯ ವಿದ್ಯುಚ್ಛಕ್ತಿ ನಿಯಮಗಳಿಗೆ ಮೇಲೆ ಹೇಳಿದ ತಿದ್ದುಪಡಿಯ ದೃಷ್ಟಿಯಿಂದ, 1959ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ 5 ಕಿ.ವಾ.ನ ಈಗಿರುವ ಮಿತಿಯನ್ನು 10 ಕಿ.ವಾ.ಗೆ ಹೆಚ್ಚಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ಅಧ್ಯಾದೇಶ, 1997ನ್ನು ಘೋಷಿಸಲಾಯಿತು.

ಈ ವಿಧೇಯಕವು ಸದರಿ ಅಧ್ಯಾದೇಶವನ್ನು ಪುನ: ಸ್ಥಾಪಿಸುತ್ತದೆ.

(ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV– 2ಎ, 25ನೇ ಆಗಸ್ಟ್ 1998ರಲ್ಲಿ ಸಂಖ್ಯೆ 339ಎಂದು ಪುಟ 2 ರಲ್ಲಿ ಪ್ರಕಟಿಸಲಾಗಿದೆ.)

## IX

**2001ರ ತಿದ್ದುಪಡಿ ಅಧಿನಿಯಮ 27.–** ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮ, 1999ನ್ನು ಅಧಿನಿಯಮಿತಿಗೊಳಿಸಿದ ಕಾರಣದಿಂದಾಗಿ ತತ್ಪರಿಣಾಮದ ಬದಲಾವಣೆಗಳನ್ನು ಸೇರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಅಧಿನಿಯಮ, 1976 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2001ರ ವಿ.ಸ. ವಿಧೇಯಕ ಸಂಖ್ಯೆ 16. ಕಡತ ಸಂಖ್ಯೆ ಸಂವ್ಯಶಾಇ 19 ಶಾಸನ 2001ನ್ನು ನೋಡಿ)

## X

**2003ರ ತಿದ್ದುಪಡಿ ಮಾಡುವ ಅಧಿನಿಯಮ 7.–** ಬಜೆಟ್ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಗಳನ್ನು ಕಾರ್ಯಗತಗೊಳಿಸಲು, ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ, 1957, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957,ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ, 1958, ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮ, 1976, ಕರ್ನಾಟಕ ವಿಲಾಸಿ ವಸ್ತುಗಳ ಮೇಲಿನ ತೆರಿಗೆ ಅಧಿನಿಯಮ, 1979, ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಅಧಿನಿಯಮ, 1979 ಮತ್ತು

ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿ.ಸ. ವಿಧೇಯಕ ಸಂಖ್ಯೆ 9)

## XI

**2004ರ ತಿದ್ದುಪಡಿ ಮಾಡುವ ಅಧಿನಿಯಮ 5.–** 2003ರ ಸೆಪ್ಟೆಂಬರ್ 4ರಂದು ಮುಖ್ಯಮಂತ್ರಿಯವರು ನಡೆಸಿದ ವಿದ್ಯುತ್ ವಲಯದ ಪುನರವಲೋಕನದ ಸಮಯದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ 10 ಗಂಟೆಗಳ ಸಿಂಗಲ್ ಪೇಸ್ ವಿದ್ಯುತ್ ಸರಬರಾಜಿನ ಜೊತೆಗೆ 3 ಪೇಸ್ ವಿದ್ಯುತ್ ಸರಬರಾಜು ಅವಧಿಯನ್ನು 6 ಗಂಟೆಗಳಿಗೆ ಹೆಚ್ಚಿಸಲು ನಿರ್ಧರಿಸಲಾಯಿತು. ಇದಕ್ಕಾಗಿ ಹೆಚ್ಚುವರಿ ವಿದ್ಯುತ್ ಖರೀದಿ ಅಗತ್ಯವಾಗುತ್ತದೆ ಹಾಗೂ ಕೆಪಿಟಿಸಿಎಲ್ (ಕವಿಪ್ರನಿನಿ) ಮತ್ತು ರಾಜ್ಯ ಸರ್ಕಾರದ ಮೇಲೆ ಹೆಚ್ಚುವರಿ ಹಣಕಾಸಿನ ಹೊರೆ ಬೀಳುತ್ತದೆ. ಆದ್ದರಿಂದ, ನಿರ್ಬಂಧಕ ವಿದ್ಯುತ್ ಉತ್ಪಾದನೆಯ ಮೂಲಕ ಬಳಸುವ ವಿದ್ಯುಚ್ಛಕ್ತಿಯ ಮೇಲೆ ಪ್ರತಿ ಯುನಿಟ್‌ಗೆ 25 ಪೈಸೆ ದರದಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ವಿಧಿಸಲು ನಿರ್ಧರಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ಅಧ್ಯಾದೇಶ, 2003ನ್ನು ಹೊರಡಿಸಲಾಯಿತು.

ಮೇಲಿನ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕ ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2004ರ ವಿ.ಸ. ವಿಧೇಯಕ ಸಂಖ್ಯೆ 5)

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ ನಮೂದು 53.)

## 1959ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 14

*(1959ರ ಸೆಪ್ಟೆಂಬರ್ ಹತ್ತನೇ ದಿನದಂದು* [1][ಕರ್ನಾಟಕ ರಾಜ್ಯ ಪತ್ರ][1] ದಲ್ಲಿ ಮೊದಲ ಬಾರಿಗೆ ಪ್ರಕಟಗೊಂಡಿತು)

## [1][ಕರ್ನಾಟಕ][1] ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959

(1959ರ ಆಗಸ್ಟ್ ಇಪ್ಪತ್ತೆಂಟನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆದಿದೆ)

(ಕರ್ನಾಟಕ ಅಧಿನಿಯಮಗಳಾದ 1970ರ 10, 1979ರ 10, 1982ರ 5, 1984ರ 25, 1985ರ 15, 1990ರ 13, 1998ರ 7, 2001ರ 27 ಮತ್ತು 2003ರ 7 ಮತ್ತು 2004ರ 5-ಇವುಗಳ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1] ದಲ್ಲಿ ವಿದ್ಯುಚ್ಛಕ್ತಿ ಬಳಕೆ ಮೇಲೆ ತೆರಿಗೆ ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

[1][ಕರ್ನಾಟಕ ರಾಜ್ಯ][1] ದಲ್ಲಿ ವಿದ್ಯುಚ್ಛಕ್ತಿ ಬಳಕೆ ಮೇಲೆ ತೆರಿಗೆ ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹತ್ತನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959 ಎಂದು ಕರೆಯತಕ್ಕದ್ದು.

(2) ಇದು, ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) 13ನೇ ಪ್ರಕರಣವನ್ನು ಹೊರತು ಪಡಿಸಿ, ಈ ಅಧಿನಿಯಮದ ಉಪಬಂಧಗಳು 1959ರ ಜುಲೈ ಮೊದಲನೇ ದಿನಾಂಕದಿಂದ ಜಾರಿಗೆ ಬಂದಿವೆ ಎಂದು ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಬಳಕೆದಾರ" ಎಂಬುದು, ಶುಲ್ಕವನ್ನು ಸಂದಾಯ ಮಾಡಿದುದರ ಮೇಲೆ ಅಥವಾ ಅನ್ಯಥಾ, ಒಬ್ಬ ಲೈಸೆನ್ಸ್‌ದಾರನಿಂದ ಯಾರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗಿದೆಯೋ ಆ ಸ್ಥಳೀಯ ಪ್ರಾಧಿಕಾರ, ಕಂಪನಿ ಅಥವಾ ಇತರ ವ್ಯಕ್ತಿಯನ್ನು ಮತ್ತು ತಾನೇ ಉತ್ಪಾದಿಸಿದ ವಿದ್ಯುತ್ತನ್ನು ಬಳಸುವ ಒಬ್ಬ ಲೈಸೆನ್ಸ್‌ದಾರ ಅಥವಾ ಇತರ ವ್ಯಕ್ತಿಯನ್ನು ಒಳಗೊಳ್ಳುತ್ತದೆ, ಆದರೆ ಇದು [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1] ಇತರರಿಗೆ ಸರಬರಾಜು ಮಾಡುವುದಕ್ಕಾಗಿ ಯಾವ ಒಬ್ಬ ಲೈಸೆನ್ಸ್‌ದಾರನಿಗೆ ವಿದ್ಯುತ್ತನ್ನು ಸರಬರಾಜು ಮಾಡುತ್ತದೆಯೋ ಆ ಲೈಸೆನ್ಸ್‌ದಾರನನ್ನು ಒಳಗೊಳ್ಳುವುದಿಲ್ಲ; ಮತ್ತು "ಬಳಕೆ" ಎಂಬ ಪದವನ್ನು ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ ತದನುಸಾರವಾಗಿ ಅರ್ಥೈಸತಕ್ಕದ್ದು;

**ವಿವರಣೆ:-** [1][ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ][1] ಇತರರಿಗೆ ಸರಬರಾಜು ಮಾಡುವುದಕ್ಕಾಗಿ ಯಾರಿಗೆ ವಿದ್ಯುತ್ತನ್ನು ಸರಬರಾಜು ಮಾಡಿರುತ್ತದೆಯೋ ಆ ಲೈಸೆನ್ಸುದಾರನು ಸ್ವತಃ ವಿದ್ಯುಚ್ಛಕ್ತಿಯ ಯಾವುದೇ ಭಾಗವನ್ನು ಬಳಸಿಕೊಂಡಲ್ಲಿ ಅವನನ್ನು ಹಾಗೆ ಬಳಸಿಕೊಂಡ ವಿದ್ಯುತ್ತಿಗೆ ಸಂಬಂಧಿಸಿದಂತೆ ಒಬ್ಬ ಬಳಕೆದಾರ ಎಂದು ಭಾವಿಸತಕ್ಕದ್ದು.

1. 2001ರ ಅಧಿನಿಯಮ 27ರ ಮೂಲಕ 10.01.2002 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

2) "ಶಕ್ತಿ" ಎಂದರೆ ವಿದ್ಯುಚ್ಛಕ್ತಿ ;

(3) " ಲೈಸೆನ್ಸುದಾರ " ಎಂದರೆ, -

[1][(ಎ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವನ್ನು ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಒಂದು ಪ್ರಸರಣ ಕಂಪನಿ ಎಂದು ನಿಗಮಿತಗೊಳಿಸಲಾಗಿದ್ದು, ಆ ಪದಾವಳಿಯು, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮ, 1999ರ 14ನೇ ಪ್ರಕರಣಕ್ಕೆ ಅನುಸಾರವಾಗಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸ್ವತ್ತನ್ನು, ಸ್ವತ್ತಿನಲ್ಲಿನ ಯಾವುದೇ ಹಿತಾಸಕ್ತಿಯನ್ನು ಮತ್ತು ಯಾವುವೇ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಸ್ವತ್ತಿನ ವರ್ಗಾವಣೆಯು ಜಾರಿಗೆ ಬರುವ ದಿನಾಂಕಕ್ಕೆ ಮುಂಚೆ ಸರಬರಾಜು ಮಾಡಿದ ವಿದ್ಯುತ್ತಿಗೆ ಸಂಬಂಧಪಟ್ಟಂತೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಒಳಗೊಳ್ಳುವುದೆಂದು ಭಾವಿಸತಕ್ಕದ್ದು.][1]

1. 2001ರ ಅಧಿನಿಯಮ 27ರ ಮೂಲಕ 10.01.2002ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

(ಬಿ) ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910 (1910ರ ಕೇಂದ್ರ ಅಧಿನಿಯಮ IX) ರ ಭಾಗ - IIರ ಅಡಿಯಲ್ಲಿ ವಿದ್ಯುತ್ತನ್ನು ಸರಬರಾಜು ಮಾಡಲು ಲೈಸೆನ್ಸು ಪಡೆದಿರುವ ಯಾರೇ ವ್ಯಕ್ತಿ ಮತ್ತು ಇದು ಸದರಿ ಅಧಿನಿಯಮದ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದಿರುವ ಯಾರೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ; ಮತ್ತು

(ಸಿ) ರಾಜ್ಯ ಸರ್ಕಾರವು ವಿದ್ಯುತ್ತನ್ನು ಸರಬರಾಜು ಮಾಡುವ ವ್ಯವಹಾರದಲ್ಲಿ ತೊಡಗಿರುವಾಗ ರಾಜ್ಯ ಸರ್ಕಾರ.

(4) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ.

(5) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

[1][**3.** [2][**ವಿದ್ಯುಚ್ಛಕ್ತಿ ಚಾರ್ಜುಗಳು ಮುಂತಾದವುಗಳ**][2] **ಮೇಲೆ ತೆರಿಗೆ ವಿಧಿಸುವುದು.-** [3][(1)][3] ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೃಷಿ (ಹತ್ತು ಅಶ್ವ ಶಕ್ತಿಯ ವರೆಗಿನ ನೀರಾವರಿ ಪಂಪು ಸೆಟ್ಟುಗಳು), ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಪ್ರವರ್ಗಗಳ ಅಡಿಯಲ್ಲಿನ ಬಳಕೆದಾರರನ್ನು ಹೊರತುಪಡಿಸಿ, ಎಲ್ಲ ಬಳಕೆದಾರರು ಸಂದಾಯ ಮಾಡಬೇಕಾದ (ಬಾಕಿಗಳನ್ನು ಬಿಟ್ಟು) ವಿದ್ಯುಚ್ಛಕ್ತಿ ಚಾರ್ಜುಗಳ ಮೇಲೆ ಶೇಕಡಾ ಐದರಷ್ಟು

ಮೌಲ್ಯಾನುಸಾರ ತೆರಿಗೆಯನ್ನು (ಇಲ್ಲಿ ಇನ್ನು ಮುಂದೆ "ವಿದ್ಯುಚ್ಛಕ್ತಿ ತೆರಿಗೆ" ಎಂದು ಉಲ್ಲೇಖಿಸಲಾಗಿದೆ) ವಿಧಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.][1]

1. 2003ರ ಅಧಿನಿಯಮ 7ರ ಮೂಲಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2004ರ ಅಧಿನಿಯಮ 5ರ ಮೂಲಕ 16.10.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2004ರ ಅಧಿನಿಯಮ 5ರ ಮೂಲಕ 16.10.2003 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

[1][(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕರ್ನಾಟಕ ವಿದ್ಯುಚ್ಛಕ್ತಿ (ಬಳಿಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ಅಧಿನಿಯಮ, 2004ರ ಪ್ರಾರಂಭದ ದಿನಾಂಕದಿಂದ ಜಾರಿಗೊಳಿಸಿ ಮತ್ತು 2004ರ ಜುಲೈ ಒಂದನೇ ದಿನಾಂಕದವರೆಗೆ,-

(i) ಅಂಥ ವಿದ್ಯುತ್‌ನ್ನು ಉತ್ಪಾದಿಸುತ್ತಿರುವ ಲೈಸೆನ್ಸುದಾರನಲ್ಲದ; ಅಥವಾ

(ii) ಅಂಥ ವಿದ್ಯುತ್‌ನ್ನು ಉತ್ಪಾದಿಸುತ್ತಿರುವ ಲೈಸೆನ್ಸುದಾರನಲ್ಲದ ವ್ಯಕ್ತಿಯು ಯಾರಿಗೆ ಅದನ್ನು ಚಾರ್ಜು ವಿಧಿಸದೆ ಉಚಿತವಾಗಿ ಸರಬರಾಜು ಮಾಡಲಾಗಿದೆಯೋ

- ಆ ಯಾರೇ ವ್ಯಕ್ತಿಯು ಬಳಸಿದ ಎಲ್ಲಾ ವಿದ್ಯುತ್ ಯುನಿಟ್‌ಗಳ ಮೇಲೆ ಪ್ರತಿ ಯೂನಿಟ್‌ಗೆ ಇಪ್ಪತ್ತೈದು ಪೈಸೆಯ ದರದಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.][1]

1. 2004ರ ಅಧಿನಿಯಮ 5ರ ಮೂಲಕ 16.10.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**4. ವಿದ್ಯುಚ್ಛಕ್ತಿ ತೆರಿಗೆಯ ಸಂದಾಯ.-** (1) ಪ್ರತಿಯೊಬ್ಬ ಲೈಸೆನ್ಸ್‌ದಾರನು, [1][ತಾನು ಬಳಕೆದಾರನಿಗೆ ನೀಡಿದ ಬಿಲ್ಲಿನಲ್ಲಿ ಸೇರಿಸಿರುವ ವಿದ್ಯುತ್ ಚಾರ್ಜುಗಳ ಮೇಲೆ][1] ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆಯನ್ನು ನಿಯಮಿಸಲಾದ ಸಮಯದಲ್ಲಿ ಮತ್ತು ರೀತಿಯಲ್ಲಿ ವಸೂಲು ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದನ್ನು ಸಂದಾಯ ಮಾಡುತಕ್ಕದ್ದು. ಹಾಗೆ ಸಂದಾಯ ಮಾಡಬೇಕಾದ ತೆರಿಗೆಯು, ಸರಬರಾಜುದಾರನು ವಿದ್ಯುತ್ತನ್ನು ಸರಬರಾಜು ಮಾಡಿದುದಕ್ಕಾಗಿ ವಸೂಲು ಮಾಡಬೇಕಾದ ಮೊಬಲಗುಗಳ ಮೇಲಿನ ಒಂದು ಪ್ರಥಮ ಹೊಣೆಯಾಗಿರತಕ್ಕದ್ದು ಮತ್ತು ಅದು ರಾಜ್ಯ ಸರ್ಕಾರಕ್ಕೆ ಅವನಿಂದ ಬಾಕಿಯಿರುವ ಒಂದು ಋಣವಾಗಿರತಕ್ಕದ್ದು:

1. 2003ರ ಅಧಿನಿಯಮ 7ರ 31.3.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಲೈಸೆನ್ಸ್‌ದಾರನು ತಾನು ಸರಬರಾಜು ಮಾಡಿದ ವಿದ್ಯುತ್ತಿಗಾಗಿ ತನಗೆ ಬಾಕಿಯಿರುವ ಮೊಬಲಗನ್ನು ವಸೂಲು ಮಾಡಲು ಅಸಮರ್ಥನಾದಲ್ಲಿ, ಅವನು ಹಾಗೆ ಸರಬರಾಜು ಮಾಡಿದ ವಿದ್ಯುತ್ತಿಗೆ ಸಂಬಂಧಿಸಿದಂತೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದಲ್ಲ.

(2) ಒಬ್ಬ ಲೈಸೆನ್ಸುದಾರನು ಭರಿಸಿದ ವಿದ್ಯುಚ್ಛಕ್ತಿ ತೆರಿಗೆ ವಸೂಲಿ ವೆಚ್ಚವನ್ನು ಗಮನದಲ್ಲಿರಿಸಿಕೊಂಡು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಮೊಬಲಗಿನ ಒಂದು ಸೋಡಿಯನ್ನು ನೀಡಬಹುದು:

ಪರಂತು, ಸೋಡಿ ಮೊಬಲಗು ಲೈಸೆನ್ಸ್‌ದಾರನು ವಸೂಲಿ ಮಾಡಿದ ವಿದ್ಯುಚ್ಛಕ್ತಿ ತೆರಿಗೆಯ ಶೇಕಡಾ ಎರಡರಷ್ಟನ್ನು ಮೀರತಕ್ಕದ್ದಲ್ಲ.

(3) ತಾನೇ ಉತ್ಪಾದಿಸಿದ ವಿದ್ಯುತ್ತನ್ನು ಬಳಸುವ ಅಥವಾ ವಿದ್ಯುತ್ತನ್ನು ಯಾರೇ ಇತರ ವ್ಯಕ್ತಿಗೆ ಉಚಿತವಾಗಿ ಸರಬರಾಜು ಮಾಡುವ ಪ್ರತಿಯೊಬ್ಬ ವ್ಯಕ್ತಿಯು, [1][xxx][1] 3ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆಯನ್ನು ನಿಯಮಿಸಲಾದ ಸಮಯದಲ್ಲಿ ಮತ್ತು ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಅಥವಾ ಸಂದರ್ಭಾನುಸಾರ ವಸೂಲು ಮಾಡಿ ಸಂದಾಯ ಮಾಡತಕ್ಕದ್ದು.

1. 2003ರ ಅಧಿನಿಯಮ 7ರ 31.3.2003ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಯಾರೇ ಬಳಕೆದಾರನು ತನ್ನಿಂದ ಬಾಕಿಯಿರುವ ವಿದ್ಯುಚ್ಛಕ್ತಿ ತೆರಿಗೆಯ ಮೊಬಲಗನ್ನು, ನಿಯಮಿಸಲಾದ ಸಮಯದಲ್ಲಿ ಮತ್ತು ರೀತಿಯಲ್ಲಿ ಸಂದಾಯ ಮಾಡಲು ವಿಫಲನಾದಲ್ಲಿ ಅಥವಾ ನಿರ್ಲಕ್ಷಿಸಿದಲ್ಲಿ, ಲೈಸೆನ್ಸುದಾರ ಅಥವಾ ಸಂದರ್ಭಾನುಸಾರ, ಉಚಿತವಾಗಿ ವಿದ್ಯುತ್ತನ್ನು ಸರಬರಾಜು ಮಾಡುತ್ತಿರುವ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮೊಬಲಗನ್ನು ವಸೂಲು ಮಾಡುವ ರಾಜ್ಯ ಸರ್ಕಾರದ ಹಕ್ಕಿಗೆ ಬಾಧಕವಾಗದಂತೆ, ಅಂಥ ವ್ಯಕ್ತಿಗೆ ಏಳು ಪೂರ್ಣ ದಿನಗಳಿಗೆ ಕಡಿಮೆಯಿಲ್ಲದ ಲಿಖಿತ ನೋಟೀಸನ್ನು ನೀಡಿದ ತರುವಾಯ, ಅಂಥ ವ್ಯಕ್ತಿಗೆ ವಿದ್ಯುತ್ ಸರಬರಾಜು ಮಾಡುವುದನ್ನು ನಿಲ್ಲಿಸತಕ್ಕದ್ದು; ಮತ್ತು ಅವನು, ಆ ಉದ್ದೇಶಕ್ಕಾಗಿ, ತಾನು ಸರಬರಾಜು ಮಾಡಿದ ವಿದ್ಯುತ್ತಿಗೆ ಸಂಬಂಧಿಸಿದಂತೆ ಬಾಕಿಯಿರುವ ಯಾವುದೇ ಶುಲ್ಕ ಅಥವಾ ಮೊತ್ತದ ವಸೂಲಾತಿಗಾಗಿ, ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮ, 1910ರ 24ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಒಬ್ಬ ಲೈಸೆನ್ಸುದಾರನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು.

(5) ಈ ಪ್ರಕರಣದಲ್ಲಿರುವುದು ಯವುದೂ,

(i) ವಾಹನಗಳು ಅಥವಾ ನೌಕೆಗಳ ಉಪಯೋಗಕ್ಕಾಗಿ ಸರಬರಾಜು ಮಾಡಲು ವಿದ್ಯುತ್ತನ್ನು ಉತ್ಪಾದಿಸುವ ಯಾರೇ ವ್ಯಕ್ತಿಗೆ ;

(ii) [1][ಹತ್ತು ಕಿಲೋವ್ಯಾಟ್‌ಗಳ][1] ಸಾಮರ್ಥ್ಯವನ್ನು ಮೀರದ ಜನರೇಟರ್‌ಗಳ ಮೂಲಕ ಉತ್ಪಾದಿಸಿದ ವಿದ್ಯುತ್ತಿನ ಬಳಕೆಗೆ

– ಅನ್ವಯವಾಗತಕ್ಕದ್ದಲ್ಲ.

1. 1998ರ ಅಧಿನಿಯಮ 7ರ ಮೂಲಕ 24.10.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**5. ಲೆಕ್ಕದ ಪುಸ್ತಕಗಳು, ಇತ್ಯಾದಿ.–** ಪ್ರತಿಯೊಬ್ಬ ಲೈಸೆನ್ಸುದಾರ ಮತ್ತು 4ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಒಬ್ಬ ಲೈಸೆನ್ಸುದಾರನಾಗಿರದ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಲಾದ ನಮೂನೆಯಲ್ಲಿ ಲೆಕ್ಕದ ಪುಸ್ತಕಗಳನ್ನು ವಿದ್ಯುತ್ತಿನ ಯೂನಿಟ್‌ಗಳ ಮತ್ತು [1][ಅವನು ಬಳಕೆದಾರರಿಗೆ ಸರಬರಾಜು ಮಾಡಿದ ವಿದ್ಯುತ್ತಿನ ಒಟ್ಟು ಯೂನಿಟ್‌ಗಳು, ಮತ್ತು [2][3ನೇ ಪ್ರಕರಣದ ಅಡಿಯಲ್ಲಿ ಅವುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲು][2] ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ತೋರಿಸುವ][1] ವಿವರ ಪಟ್ಟಿಕೆಗಳನ್ನು ರಾಜ್ಯ ಸರ್ಕಾರಕ್ಕೆ ಅಥವಾ ನಿಯಮಿಸಲಾದ ಅಧಿಕಾರಿಗೆ ಸಲ್ಲಿಸತಕ್ಕದ್ದು.

1. 1982ರ ಅಧಿನಿಯಮ 5ರ ಮೂಲಕ 29.12.1981ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ 7ರ ಮೂಲಕ 01.04.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಪರಿಶೀಲನಾಧಿಕಾರಿಗಳು.–** (1) 5ನೇ ಪ್ರಕರಣದ ಅಡಿಯಲ್ಲಿ ನಿರ್ವಹಿಸಲಾದ ನಿಯಮಿತ ಲೆಕ್ಕದ ಪುಸ್ತಕಗಳನ್ನು ಪರಿಶೀಲಿಸಲು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪರಿಶೀಲನಾಧಿಕಾರಿಗಳನ್ನು ನೇಮಿಸಬಹುದು.

(2) ಪರಿಶೀಲನಾಧಿಕಾರಿಗಳು, ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಿಸಲಾದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರತಿಯೊಬ್ಬ ಪರೀಶೀಲನಾಧಿಕಾರಿಯನ್ನು ಭಾರತ ದಂಡ ಸಂಹಿತೆಯ (1860 ರ ಕೇಂದ್ರ ಅಧಿನಿಯಮ XLV) 21ನೇ ಪ್ರಕರಣದ ಮತ್ತು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ II) ಅರ್ಥವ್ಯಾಪ್ತಿಯೊಳಗೆ ಒಬ್ಬ ಲೋಕ ನೌಕರನೆಂದು ಭಾವಿಸತಕ್ಕದ್ದು.

**7. ವಸೂಲಾತಿಗಳು.–** ನಿಯಮಿಸಲಾದ ಸಮಯದಲ್ಲಿ ಮತ್ತು ವಿಧಾನದಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡದೇ ಇದ್ದ ಕಾರಣ ಬಾಕಿಯಿರುವ ಸಂಬಂಧದಲ್ಲಿ ಯಾವುದೇ ಮೊತ್ತವನ್ನು ಬಾಕಿ ಎಂದು ಭಾವಿಸತಕ್ಕದ್ದು ಮತ್ತು ಆ ತರುವಾಯ ಆ ಮೊತ್ತದ ಮೇಲೆ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿಗದಿಪಡಿಸಬಹುದಾದಂತೆ ವರ್ಷಕ್ಕೆ [2][ಶೇಕಡ ಇಪ್ಪತ್ನಾಲ್ಕರಷ್ಟನ್ನು][2] ಮೀರದ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು; ಮತ್ತು

(i) ಆ ಮೊತ್ತವು, 4ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಬಳಕೆದಾರನಿಂದಾಗಲೀ ಅಥವಾ ಸದರಿ ಉಪ ಪ್ರಕರಣದ ಪರಂತುಕಕ್ಕೊಳಪಟ್ಟು, ರಾಜ್ಯ ಸರ್ಕಾರದ ಆಯ್ಕೆಯ ಮೇರೆಗೆ ಲೈಸೆನ್ಸ್‌ದಾರನಿಂದಾಗಲೀ ಸಂದಾಯವಾಗುವಂಥದ್ದಾಗಿದ್ದರೆ ;

(ii) ಆ ಮೊತ್ತವು, 4ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಬಳಕೆದಾರನಿಂದಾಗಲೀ ಅಥವಾ ರಾಜ್ಯ ಸರ್ಕಾರದ ಆಯ್ಕೆಯ ಮೇರೆಗೆ ಉಚಿತವಾಗಿ ವಿದ್ಯುತ್ತನ್ನು ಸರಬರಾಜು ಮಾಡುತ್ತಿರುವ ವ್ಯಕ್ತಿಯಿಂದಾಗಲೀ ಅಥವಾ ತನ್ನ ಸ್ವಂತ ಬಳಕೆಗಾಗಿ ವಿದ್ಯುತ್ತನ್ನು ಉತ್ಪಾದಿಸುವ ವ್ಯಕ್ತಿಯಿಂದಾಗಲೀ ಸಂದಾಯವಾಗುವಂಥದ್ದಾಗಿದ್ದರೆ

ಆ ಮೊತ್ತವನ್ನು ಅದರ ಮೇಲಿನ ಬಡ್ಡಿಯೊಂದಿಗೆ ಒಂದು ಸಿವಿಲ್ ನ್ಯಾಯಾಲಯದ ಮೂಲಕವಾಗಲಿ ಅಥವಾ ಭೂ ಕಂದಾಯದ ಒಂದು ಬಾಕಿಯಂತಾಗಲಿ ವಸೂಲು ಮಾಡತಕ್ಕದ್ದು.

**8. ತೆರಿಗೆ ವಿನಾಯಿತಿಗಳನ್ನು ಮತ್ತು ಕಡಿತಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (i) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸರಬರಾಜು ಮಾಡಲಾದ ಅಥವಾ ಬಳಸಲಾದ ವಿದ್ಯುತ್ತಿನ ಮೇಲೆ; ಅಥವಾ

(ii) ಬಳಕೆದಾರರ ಯಾವುದೇ ವರ್ಗಕ್ಕೆ

– ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಸಂಬಂಧದಲ್ಲಿನ ದರದಲ್ಲಿ ಒಂದು ವಿನಾಯಿತಿಯನ್ನು ನೀಡಬಹುದು ಅಥವಾ ಒಂದು ಕಡಿತವನ್ನು ಮಾಡಬಹುದು.

[1][**8ಎ. ಕೆಲವು ಕರಾರುಗಳ ನೆರವೇರಿಕೆಯಿಂದ ವಿನಾಯಿತಿ ನೀಡುವುದು.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆಜ್ಞೆಯಲ್ಲಿ ಅಥವಾ ಅಂಥ ಯಾವುದೇ ಕಾನೂನಿನ ಬಲ ಹೊಂದಿರುವ ಯಾವುದೇ ಕರಾರು ಅಥವಾ ಲಿಖಿತದಲ್ಲಿ ಏನೇ ಒಳಗೊಂಡಿದ್ದರೂ, ಆದರೆ 8ನೇ ಪ್ರಕರಣಕ್ಕೆ ಒಳಪಟ್ಟು,

(ಎ) ರಾಜ್ಯ ಸರ್ಕಾರದಿಂದ ಅಥವಾ ಲೈಸೆನ್ಸುದಾರನಿ ಂದ ಮಾಡಲಾಗುವ ಯಾವುದೇ ಕರಾರಿನ ನೆರವೇರಿಕೆ, ಅದು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯಂತೆ ಒಬ್ಬ ಬಳಕೆದಾರನಿಗೆ ವಿಧಿಸಿದ ಅಥವಾ ಅವನಿಂದ ಸಂಗ್ರಹಿಸಿದ ಯಾವುದೇ ಮೊತ್ತಕ್ಕೆ ಬಳಕೆದಾರನ ಪರವಾಗಿ ಆ ಮೊತ್ತವನ್ನು ತುಂಬಿಕೊಡುವುದಕ್ಕೆ ಅಥವಾ ಆ ಮೊತ್ತಕ್ಕೆ ನಷ್ಟ ಪರಿಹಾರ ನೀಡುವುದಕ್ಕೆ ಅವಕಾಶ ಮಾಡಿಕೊಡುವಷ್ಟರ ಮಟ್ಟಿಗೆ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಯಾವಾಗಲೂ ಬಿಟ್ಟು ಬಿಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಕರಾರಿನ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಲೈಸೆನ್ಸುದಾರನು ಒಬ್ಬ ಬಳಕೆದಾರನಿಗೆ ಹಾಗೆ ತುಂಬಿಕೊಡಬೇಕಾದ ಅಥವಾ ನಷ್ಟ ಪರಿಹಾರವಾಗಿ ನೀಡಬೇಕಾದ ಯಾವುದೇ ಬಾಕಿ ಮೊತ್ತವನ್ನು ಬಡ್ಡಿ ಯಾವುದಾದರೂ ಇದ್ದಲ್ಲಿ, ಅದನ್ನು ಒಳಗೊಂಡಂತೆ ಪೂರ್ಣವಾಗಿ ತೀರಿಸಲಾಗಿದೆಯೆಂದು ಭಾವಿಸತಕ್ಕದ್ದು;

(ಬಿ) ಸಿವಿಲ್ ನ್ಯಾಯಾಲಯವು, ಬಡ್ಡಿಯೂ ಒಳಗೊ ಂಡಂತೆ ಅಂಥ ತುಂಬಿಕೊಡುವಿಕೆ ಅಥವಾ ಪರಿಹಾರದ ರೂಪದಲ್ಲಿ ಯಾವುದೇ ಮೊಬಲಗಿನ ವಸೂಲಾತಿಗಾಗಿ ರಾಜ್ಯ ಸರ್ಕಾರ ಅಥವಾ ಲೈಸೆನ್ಸು ದಾರನ ವಿರುದ್ಧ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಸ್ವೀಕರಿಸತಕ್ಕದ್ದಲ್ಲ;

(ಸಿ) ಯಾವುದೇ ಅಂಥ ಮೊಬಲಿಗಿನ ವಸೂಲಾತಿಗಾಗಿ, ರಾಜ್ಯ ಸರ್ಕಾರ ಅಥವಾ ಲೈಸೆನ್ಸುದಾರನ ವಿರುದ್ಧ ಸದರಿ ದಿನಾಂಕದಂದು ಇತ್ಯರ್ಥದಲ್ಲಿರುವ ಎಲ್ಲಾ ದಾವೆಗಳು ಮತ್ತು ವ್ಯವಹರಣೆಗಳು (ಅಪೀಲುಗಳು, ಪರಿಷ್ಕರಣೆಗಳು, ಜಪ್ತಿಗಳು ಅಥವಾ ಅಮಲ್ಜಾರಿ ವ್ಯವಹರಣೆಗಳೂ ಸೇರಿದಂತೆ) ಕೊನೆಗೊಳ್ಳತಕ್ಕದ್ದು :

ಪರಂತು, ಈ ಪ್ರಕರಣದಲ್ಲಿರುವ ಯಾವುದೂ, ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ಅಧಿನಿಯಮ, 1990 ರ ಪ್ರಾರಂಭಕ್ಕೆ ಮುಂಚೆ ತುಂಬಿಕೊಡುವಿಕೆ ಅಥವಾ ನಷ್ಟ ಪರಿಹಾರ ರೂಪದಲ್ಲಿ ಈಗಾಗಲೇ ಸಂದಾಯ ಮಾಡಿರುವ ಯಾವುದೇ ಮೊಬಲಗಿನ ಮರುಪಾವತಿಗಾಗಿ ರಾಜ್ಯ ಸರ್ಕಾರಕ್ಕೆ ಅಥವಾ ಲೈಸೆನ್ಸುದಾರನಿಗೆ ಹಕ್ಕು ನೀಡತಕ್ಕದ್ದಲ್ಲ.][1]

1. 1990ರ ಅಧಿನಿಯಮ 13ರ ಮೂಲಕ 21.11.1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**9. ದಂಡಗಳು.–** (1) 5ನೇ ಪ್ರಕರಣದ ಅಡಿಯಲ್ಲಿ ಲೆಕ್ಕದ ಪುಸ್ತಕಗಳನ್ನು ನಿರ್ವಹಿಸಲು ಅಥವಾ ಒಪ್ಪಿಸಲು ಹೊಣೆಗಾರನಾದ ಯಾರೇ ವ್ಯಕ್ತಿಯು, ನಿಯಮಿಸಲಾದ ರೀತಿಯಲ್ಲಿ ಅವುಗಳನ್ನು ನಿರ್ವಹಿಸಲು ಅಥವಾ ಒಪ್ಪಿಸಲು ವಿಫಲನಾದರೆ ಅಥವಾ ಪರೀಶೀಲಕನು ಈ ಅಧಿನಿಯಮದ ಅಡಿಯಲ್ಲಿ ತನ್ನ ಅಧಿಕಾರಗಳನ್ನು ಮತ್ತು

ಕರ್ತವ್ಯಗಳನ್ನು ಚಲಾಯಿಸುವಲ್ಲಿ ಅವನಿಗೆ ಅಡ್ಡಿಪಡಿಸಿದರೆ, ಅಥವಾ 10ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣಯವಾದ ತರುವಾಯ ಅವನನ್ನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿಸತಕ್ಕದ್ದು.

(2) (ಎ) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಆ ಅಪರಾಧವನ್ನು ಮಾಡಿದ ಸಮಯದಲ್ಲಿ ಆ ಕಂಪನಿಯ ಆಡಳಿತದ ಪ್ರಭಾರದಲ್ಲಿದ್ದ ಮತ್ತು ಆ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕೆ ಜವಾಬ್ದಾರನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು :

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು, ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಖಂಡದಲ್ಲಿರುವುದು ಯಾವುದೂ, ಮೇಲೆ ತಿಳಿಸಿದ ಉಪಪ್ರಕರಣದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(ಬಿ) (ಎ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಕಂಪನಿಯ ಇತರ ಅಧಿಕಾರಿಯ ಒಪ್ಪಿಗೆ ಅಥವಾ ಪರೋಕ್ಷ ಸಮ್ಮತಿಯ ಮೇರೆಗೆ ಮಾಡಲಾಗಿದೆ ಎಂದು ರುಜುವಾತುಪಡಿಸಿರುವಲ್ಲಿ ಅಥವಾ ಆ ಅಪರಾಧವು ಅವರ ಯಾವುದೇ ನಿರ್ಲಕ್ಷ್ಯದಿಂದ ಆಯಿತೆಂದು ಹೇಳಬಹುದಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಕೂಡ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಆ ಪ್ರಕಾರ ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ**.- ಈ ಉಪ ಪ್ರಕರಣದ ಉದ್ದೇಶಗಳಿಗಾಗಿ,

(ಎ) "ಕಂಪನಿ ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್‌ನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನೂ ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಆ ಫರ್ಮಿನ ಒಬ್ಬ ಪಾಲುದಾರ.

**10**. **ನಿಯಮ ರಚನಾಧಿಕಾರ**.- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ ರಾಜ್ಯ ಸರ್ಕಾರವು,

(ಎ) 3 ಮತ್ತು 4ನೇ ಪ್ರಕರಣಗಳ ಅಡಿಯಲ್ಲಿ, ವಿದ್ಯುಚ್ಛಕ್ತಿ ತೆರಿಗೆ ಸಂದಾಯದ ಸಮಯ ಮತ್ತು ರೀತಿಯನ್ನು ನಿಯಮಿಸುವ ಬಗ್ಗೆ;

(ಬಿ) 5ನೇ ಪ್ರಕರಣದ ಮೇರೆಗೆ ನಿರ್ವಹಿಸಬೇಕಾದ ಲೆಕ್ಕದ ಪುಸ್ತಕಗಳ ನಮೂನೆಯನ್ನು ಮತ್ತು ಅಗತ್ಯಪಡಿಸಲಾದ ವಿವರ ಪಟ್ಟಿಕೆಗಳನ್ನು ಯಾವ ಸಮಯದಲ್ಲಿ, ಯಾವ ನಮೂನೆಯಲ್ಲಿ ಮತ್ತು ಯಾವ ಅಧಿಕಾರಿಗೆ ಸಲ್ಲಿಸತಕ್ಕದ್ದೆಂಬುದನ್ನು ನಿಯಮಿಸುವ ಬಗ್ಗೆ;

(ಸಿ) ಪರಿಶೀಲನಾಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿಯಮಿಸುವ ಬಗ್ಗೆ; ಮತ್ತು

(ಡಿ) ಈ ಅಧಿನಿಯಮದಲ್ಲಿ ಉಪಬಂಧಿಸಿರದ ಅಥವಾ ಸಾಕಷ್ಟು ಮಟ್ಟಿಗೆ ಉಪಬಂಧಿಸಿರದ ಯಾವುದೇ ಇತರ ವಿಷಯಗಳಿಗೆ ಮತ್ತು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ಉಪಬಂಧ ಕಲ್ಪಿಸುವುದು ಅವಶ್ಯಕವಿರುವ ವಿಷಯಗಳಿಗೆ ಉಪಬಂಧ ಕಲ್ಪಿಸುವ ಬಗ್ಗೆ

– ನಿಯಮಗಳನ್ನು ರಚಿಸಬಹುದು.

**11. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.–** 10ನೇ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ನಿಯಮವನ್ನು ಮತ್ತು 8 ಅಥವಾ 14ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿ ಮುಗಿಯುವ ಮುಂಚೆ ಅಂಥ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಯಾವೊಂದು ಸದನವು ನಿರ್ದೇಶಿಸಿದರೆ ಅಥವಾ ಅಂಥ ನಿಯಮ ಅಥವಾ ಅಧಿಸೂಚನೆಯು ಪರಿಣಾಮಕಾರಿಯಾಗತಕ್ಕದ್ದಲ್ಲ ಎಂದು ನಿರ್ದೇಶಿಸಿದರೆ, ಮತ್ತು ಆ ಮಾರ್ಪಾಟು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ, ಸದರಿ ನಿಯಮ ಅಥವಾ ಸಂದರ್ಭಾನುಸಾರ ಅಧಿಸೂಚನೆಯು, ಆ ತರುವಾಯ, ಹಾಗೆ ಮಾರ್ಪಾಟು ಮಾಡಿದಂಥ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ.

**12. ನಿರಸನ ಮತ್ತು ಉಳಿಸುವಿಕೆಗಳು.–** ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ, ಮೈಸೂರು ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1950 (1950ರ ಮೈಸೂರು ಅಧಿನಿಯಮ XX), [1][ಬೆಳಗಾವಿ ಪ್ರದೇಶ][1] ದಲ್ಲಿ ಜಾರಿಯಲ್ಲಿರುವಂತೆ ಬಾಂಬೆ ಹಣಕಾಸು ಅಧಿನಿಯಮ, 1932ರ (1932ರ ಬಾಂಬೆ ಅಧಿನಿಯಮ II) ಭಾಗ II ಮತ್ತು [1][ಮಂಗಳೂರು ಮತ್ತು – ಕೊಳ್ಳೇಗಾಲ ಪ್ರದೇಶ][1] ದಲ್ಲಿ ಜಾರಿಯಲ್ಲಿರುವಂತೆ ಮದ್ರಾಸ್ ವಿದ್ಯುಚ್ಛಕ್ತಿ ಸುಂಕ ಅಧಿನಿಯಮ, 1939 (1939ರ ಮದ್ರಾಸ್ ಅಧಿನಿಯಮ VI) ಇವುಗಳು ನಿರಸನಗೊಳ್ಳತಕ್ಕದ್ದು:

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಅಂಥ ನಿರಸನವು, –

(ಎ) ಸದರಿ ಅಧಿನಿಯಮಿತಿಗಳ ಹಿಂದಿನ ಕಾರ್ಯಾಚರಣೆ ಅಥವಾ ಅವುಗಳ ಅಡಿಯಲ್ಲಿ ವಿಧ್ಯುಕ್ತವಾಗಿ ಮಾಡಲಾದ ಅಥವಾ ಮಾಡಲು ಅವಕಾಶ ಮಾಡಿಕೊಡಲಾದ ಯಾವುದೇ ಕಾರ್ಯದ ಮೇಲೆ;

(ಬಿ) ಸದರಿ ಅಧಿನಿಯಮಿತಿಗಳ ಅಡಿಯಲ್ಲಿ ಆರ್ಜಿಸಲಾದ, ಪ್ರಾಪ್ತವಾದ, ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯ ಮೇಲೆ; ಅಥವಾ

(ಸಿ) ಸದರಿ ಅಧಿನಿಯಮಿತಿಗಳಿಗೆ ವಿರುದ್ಧವಾಗಿ ಮಾಡಲಾದ ಯಾವುದೇ ಅಪರಾಧದ ಸಂಬಂಧದಲ್ಲಿ ವಿಧಿಸಲಾದ ಯಾವುದೇ ದಂಡ, ಮಾಡಲಾದ ಮುಟ್ಟುಗೋಲು ಅಥವಾ ದಂಡನೆಯ ಮೇಲೆ ; ಅಥವಾ

(ಡಿ) ಹಿಂದೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ (ಕರ ನಿರ್ಧರಣಾ ವ್ಯವಹಾರಣೆಯನ್ನು ಒಳಗೊಂಡಂತೆ) ಅಥವಾ ಪರಿಹಾರೋಪಾಯದ ಮತ್ತು ಈ ಅಧಿನಿಯಮವನ್ನು ಅಂಗೀಕರಿಸದಿದ್ದರೆ ಹೂಡಬಹುದಾಗಿರುವಂಥ; ಮುಂದುವರಿಸಬಹುದಾದಂಥ ಅಥವಾ ಜಾರಿಗೊಳಿಸಬಹುದಾದಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯದ ಮತ್ತು ವಿಧಿಸಬಹುದಾದಂಥ ಯಾವುದೇ ಅಂಥ ದಂಡ, ಮುಟ್ಟುಗೋಲು ಅಥವಾ ದಂಡನೆಯ ಮೇಲೆ

– ಪರಿಣಾಮ ಉಂಟುಮಾಡತಕ್ಕದ್ದಲ್ಲ.

13. 1959ರ [1][ಕರ್ನಾಟಕ][1] ಅಧ್ಯಾದೇಶ ಸಂಖ್ಯೆ 2ರ ನಿರಸನ ಮತ್ತು ಉಳಿಸುವಿಕೆಗಳು.- [1][ಕರ್ನಾಟಕ][1] ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧ್ಯಾದೇಶ, 1959 ನ್ನು ಈ ಮೂಲಕ ನಿರಸನಗೊಳಿಸಲಾಗಿದೆ;

ಹಾಗೆ ನಿರಸನಗೊಂಡಿದ್ದಾಗ್ಯೂ,

(i) ಸದರಿ ಅಧ್ಯಾದೇಶದ ಅಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು;

(ii) ಸದರಿ ಅಧ್ಯಾದೇಶದ ವಿರುದ್ಧ ಮಾಡಲಾದ ಯಾವುದೇ ಅಪರಾಧದ ಸಂಬಂಧದಲ್ಲಿ ವಹಿಸಲಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು; ಮತ್ತು

(iii) ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನೇಮಕ, ಅಧಿಸೂಚನೆ, ಆದೇಶ, ನಿಯಮ ಅಥವಾ ನಮೂನೆಯನ್ನು ಅಥವಾ ಮಾಡಲಾದ ಯಾವುದೇ ಕಾರ್ಯ ಅಥವಾ ತೆಗೆದುಕೊಳ್ಳಲಾದ ಯಾವುದೇ ಕ್ರಮವನ್ನು

– ಈ ಅಧಿನಿಯಮದ ಅಡಿಯಲ್ಲಿ ಸೂಕ್ತ ಸಮಯದಲ್ಲಿ ಆರ್ಜಿಸಲಾಗಿದೆ, ಪ್ರಾಪ್ತವಾಗಿದೆ ಅಥವಾ ವಹಿಸಲಾಗಿದೆ ಅಥವಾ ಮಾಡಲಾಗಿದೆ, ಹೊರಡಿಸಲಾಗಿದೆ, ಕೈಗೊಳ್ಳಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಲ್ಲಿ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**14. ತೊಂದರೆಗಳ ನಿವಾರಣಾಧಿಕಾರ.-** (1) 12ನೇ ಪ್ರಕರಣದ ಮೂಲಕ ನಿರಸನಗೊಳಿಸಲಾದ ಅಧಿನಿಯಮಿತಿಗಳ ಉಪಬಂಧಗಳಿಂದ ಸದರಿ ಉಪಬಂಧಗಳಿಗೆ ಪರಿವರ್ತಿಸುವುದರ ಪರಿಣಾಮವಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅಗತ್ಯವೆಂದು ಅಥವಾ ವಿಹಿತವೆಂದು ತೋರುವ ಉಪಬಂಧಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಉಪಬಂಧಗಳನ್ನು (12ನೇ ಪ್ರಕರಣದ ಮೂಲಕ ನಿರಸನಗೊಂಡ ಅಧಿನಿಯಮಿತಿಗಳ ಉಪಬಂಧಗಳಿಂದ ಮಾಡಿದ ಪರಿವರ್ತನೆಯ ಸಂಬಂಧದ ಹೊರತಾಗಿ) ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅಗತ್ಯವೆಂದು ಅಥವಾ ವಿಹಿತವೆಂದು ತೋರುವ ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

**ಅಧಿಸೂಚನೆ**

**ಸಂಖ್ಯೆ: ಡಿಇ 61 ಪಿಎಸ್‌ಆರ್ 2001, ಬೆಂಗಳೂರು ದಿನಾಂಕ:10ನೇ ಜನವರಿ, 2002**

(ಕರ್ನಾಟಕ ರಾಜ್ಯಪತ್ರ, ಭಾಗ IVಎ ವಿಶೇಷ ಸಂಚಿಕೆ, ಸಂಖ್ಯೆ: 494, ದಿನಾಂಕ: 04.04.2002ರಲ್ಲಿ ಪ್ರಕಟವಾಗಿದೆ.)

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಬಾಕಿಗಳ ವಸೂಲಿ) ಮತ್ತು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2001 (2001ರ ಕರ್ನಾಟಕ ಅಧಿನಿಯಮ ಸಂಖ್ಯೆ 27)ರ 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2002ರ ಜನವರಿ 10ನೇ ದಿನಾಂಕವನ್ನು ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕೆ. ಶ್ರೀನಿವಾಸ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ವಿದ್ಯುತ್ ಇಲಾಖೆ.

## ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959

### ನಿಯಮಗಳ ಅನುಕ್ರಮಣಿಕೆ

**ನಿಯಮಗಳು:**

1. ಶೀರ್ಷಿಕೆ.
2. ಪರಿಭಾಷೆಗಳು.
3. ಸಂಗ್ರಹಣೆ ಮತ್ತು ಸಂದಾಯದ ಸಮಯ ಮತ್ತು ರೀತಿ.
4. ಲೆಕ್ಕದ ಪುಸ್ತಕಗಳು.
5. ವಿವರ ಪಟ್ಟಿಕೆಗಳನ್ನು ಸಲ್ಲಿಸುವುದು.
6. ಲೆಕ್ಕದ ಪುಸ್ತಕಗಳ ಪರಿಶೀಲನೆ.
7. ಪರಿಶೀಲನಾ ಅಧಿಕಾರಿಗಳ ಪ್ರವೇಶಿಸುವ ಅಧಿಕಾರ.
8. ಮೀಟರುಗಳನ್ನು ಓದುವುದು.
9. ಸರಿಹೊಂದಾಣಿಕೆಗಳು ಮತ್ತು ಮರು ಪಾವತಿಗಳು.
10. ಲೈಸೆನ್ಸುದಾರರಾಗಿರದ ವ್ಯಕ್ತಿಗಳಿಗೆ ವಿಶೇಷ ಉಪಬಂಧಗಳು.

ನಮೂನೆಗಳು ಎ ಯಿಂದ ಇ

## ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959

**ಅಧಿಸೂಚನೆ**

**ಸಂಖ್ಯೆ : ಪಿಡಬ್ಲ್ಯುಡಿ 10 ಇಟಿಎಸ್ 59, ಬೆಂಗಳೂರು, ದಿನಾಂಕ 1ನೇ ಜುಲೈ, 1959**

(ಆಷಾಢ 10, ಶಕ ವರ್ಷ 1981)

(ಅಧಿಸೂಚನೆ ಸಂಖ್ಯೆ ಪಿಡಬ್ಲ್ಯುಡಿ 18 ಇಟಿಎಸ್ 61 ದಿನಾಂಕ 28.11.1961ಜಿಎಸ್ ಆರ್ 254 ದಿನಾಂಕ 5.8.1978 ಮತ್ತು ಜಿಎಸ್ ಆರ್ 43, ದಿನಾಂಕ 21.1.1980ರ ಮೂಲಕ ತಿದ್ದುಪಡಿಯಾದಂತೆ)

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧ್ಯಾದೇಶದ (1959ರ ಕರ್ನಾಟಕ ಅಧ್ಯಾದೇಶ 2) 10ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ:

**1. ಶೀರ್ಷಿಕೆ.**- ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.**- ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ನಮೂನೆ" ಎಂದರೆ, ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ;

(ಬಿ) "ಪರಿಶೀಲನಾಧಿಕಾರಿ" ಎಂದರೆ, ಅಧ್ಯಾದೇಶದ ಅಡಿಯಲ್ಲಿ ನೇಮಕಗೊಂಡ ಪರಿಶೀಲನಾಧಿಕಾರಿ;

(ಸಿ) "ಲೈಸೆನ್ಸುದಾರನಾಗಿರದ ವ್ಯಕ್ತಿ" ಎಂದರೆ, ಲೈಸೆನ್ಸ್‌ದಾರನಾಗಿರದೆ ವಿದ್ಯುಚ್ಛಕ್ತಿಯನ್ನು ತನ್ನ ಸ್ವಂತ ಬಳಕೆಗಾಗಿ ಉತ್ಪಾದಿಸುವ ಅಥವಾ ಉಚಿತವಾಗಿ ಯಾರೇ ಇತರ ವ್ಯಕ್ತಿಗೆ ಸರಬರಾಜು ಮಾಡುವ ವ್ಯಕ್ತಿ;

(ಡಿ) " ಪ್ರಕರಣ" ಎಂದರೆ, ಅಧ್ಯಾದೇಶದ ಒಂದು ಪ್ರಕರಣ.

**3. ಸಂಗ್ರಹಣೆ ಮತ್ತು ಸಂದಾಯದ ಸಮಯ ಮತ್ತು** ರೀತಿ.- (1) ಲೈಸೆನ್ಸುದಾರನು ಅಧ್ಯಾದೇಶದ ಅಡಿಯಲ್ಲಿ ವಿಧಿಸಬಹುದಾದ ವಿದ್ಯುಚ್ಛಕ್ತಿ ತೆರಿಗೆಯನ್ನು ಅವನು ಸರಬರಾಜು ಮಾಡಿದ ವಿದ್ಯುಚ್ಛಕ್ತಿಗಾಗಿ ವೆಚ್ಚಗಳ ಬಿಲ್ಲಿನಲ್ಲಿ ಪ್ರತ್ಯೇಕ ಬಾಬ್ತು ಆಗಿ ಸೇರಿಸತಕ್ಕದ್ದು ಮತ್ತು ಅಂಥ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದಕ್ಕಾಗಿ ಅವನ ಸ್ವಂತ ವೆಚ್ಚಗಳ ಜೊತೆಯಲ್ಲಿ ಅದನ್ನು ಗ್ರಾಹಕನಿಂದ ವಸೂಲಿ ಮಾಡತಕ್ಕದ್ದು. [1][ಒಂದು ತಿಂಗಳಲ್ಲಿ ಹಾಗೆ ಸಂಗ್ರಹಣೆ ಮಾಡಿದ ತೆರಿಗೆಗೆ ಸಂಬಂಧಿಸಿದಂತೆ ಲೈಸೆನ್ಸುದಾರನು,

(ಎ) ಹಿಂದಿನ 12 ತಿಂಗಳ ಅವಧಿಯಲ್ಲಿ ಅವನು ಸಂದಾಯ ಮಾಡಿದ ಮಾಸಿಕ ಸರಾಸರಿ ತೆರಿಗೆಗೆ ಸಮನಾದ ಮೊತ್ತವನ್ನು ಪ್ರತಿ ತಿಂಗಳು ಮುಗಿದ ನಂತರ ಎರಡು ತಿಂಗಳ ಒಳಗಾಗಿ ; ಮತ್ತು

(ಬಿ) (ಎ) ಖಂಡದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತ ಮತ್ತು ಆ ತಿಂಗಳಲ್ಲಿ ವಾಸ್ತವವಾಗಿ ವಸೂಲಿ ಮಾಡಿದ ತೆರಿಗೆ ಇವುಗಳ ನಡುವಣ ವ್ಯತ್ಯಾಸಕ್ಕೆ ಸಮನಾದ ಮೊತ್ತವನ್ನು ಮೇಲೆ ಹೇಳಿರುವ ಎರಡು ತಿಂಗಳ ಅವಧಿಯು ಮುಕ್ತಾಯವಾದ ನಂತರ][1]

– ಸರ್ಕಾರದ ಖಜಾನೆಗೆ ಜಮೆ ಮಾಡತಕ್ಕದ್ದು.

1.ಅಧಿಸೂಚನೆ ಸಂಖ್ಯೆ ಪಿಡಬ್ಲ್ಯುಡಿ 25 ಇಐಜಿ 75, ದಿನಾಂಕ 5.8.1978 ಮತ್ತು ಜಿಎಸ್ ಆರ್ 254 ಕೆಜಿಡಿ 17.8.1998 ಇದನ್ನು ದಿನಾಂಕ 17.8.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಲೈಸೆನ್ಸ್‌ದಾರನಾಗಿರದ ಪ್ರತಿಯೊಬ್ಬ ವ್ಯಕ್ತಿಯು, ಅವನು ತಾನಾಗಿಯೇ ಬಳಸಿಕೊಂಡ ಅಥವಾ ಅವನು ಸರಬರಾಜು ಮಾಡಿದ ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ಸಮುಚಿತ ದರಗಳಲ್ಲಿ ಪ್ರತಿಯೊಂದು ಕ್ಯಾಲೆಂಡರ್ ತಿಂಗಳಲ್ಲಿ ಬಾಕಿಯಿರುವ ತೆರಿಗೆಯ ಮೊತ್ತವನ್ನು ಆ ತಿಂಗಳ ಕೊನೆಯಿಂದ ಮೂವತ್ತು ದಿನಗಳ ಅವಧಿಯೊಳಗೆ ಸರ್ಕಾರಿ ಖಜಾನೆಗೆ ಜಮೆ ಮಾಡುವ ಮೂಲಕ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಅಥವಾ ಸಂದರ್ಭಾನುಸಾರ ವಸೂಲಿ ಮಾಡಿ ಸಂದಾಯ ಮಾಡತಕ್ಕದ್ದು.

[1][(3) ಲೈಸೆನ್ಸ್‌ದಾರ ಅಥವಾ ಸಂದರ್ಭಾನುಸಾರ ಲೈಸೆನ್ಸ್ ದಾರನಾಗಿರದ ವ್ಯಕ್ತಿಯು, (1)ನೇ ಉಪ ನಿಯಮದ ಮತ್ತು (2)ನೇ ಉಪನಿಯಮದ (ಎ) ಮತ್ತು (ಬಿ) ಖಂಡಗಳಲ್ಲಿ ಗೊತ್ತುಪಡಿಸಿದ ಅವಧಿಯೊಳಗೆ ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡದಿದ್ದಲ್ಲಿ, 7ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಸರ್ಕಾರವು ತತ್ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ತಡವಾದ ಅವಧಿಗೆ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.][1]

1.ಅಧಿಸೂಚನೆ ಸಂಖ್ಯೆ ಪಿಡಬ್ಲ್ಯುಡಿ 25 ಇಐಜಿ 75, ದಿನಾಂಕ 5.8.1978 ಮತ್ತು ಜಿಎಸ್ ಆರ್ 254 ಕೆಜಿಡಿ 17.8.1998 ಇದನ್ನು ದಿನಾಂಕ 17.8.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**4. ಲೆಕ್ಕದ ಪುಸ್ತಕಗಳು.**– (1) 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸುದಾರನು ಇಡಬೇಕಾದ ಲೆಕ್ಕದ ಪುಸ್ತಕಗಳು ನಮೂನೆ ಎ ಯಲ್ಲಿರತಕ್ಕದ್ದು ಮತ್ತು ಅವು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:

(i) 3ನೇ ಪ್ರಕರಣದ ಅಡಿಯಲ್ಲಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಹಕರ ವಿವಿಧ ವರ್ಗಗಳಿಗೆ ಸರಬರಾಜು ಮಾಡಿದ ವಿದ್ಯುಚ್ಛಕ್ತಿಯ ಯೂನಿಟ್ಟುಗಳ ಸಂಖ್ಯೆ ;

(ii) ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ ಆವರಣಗಳ ವಿವರಗಳು;

(iii) ವಿವಿಧ ವರ್ಗಗಳ ಗ್ರಾಹಕರ ಸಂಬಂಧದಲ್ಲಿ ವಿಧಿಸಿದ ವೆಚ್ಚಗಳನ್ನು ಮತ್ತು ವಿದ್ಯುಚ್ಛಕ್ತಿ ತೆರಿಗೆಯ ಮೊತ್ತವನ್ನು ಪ್ರತ್ಯೇಕವಾಗಿ ತೋರಿಸುವುದು;

(iv) ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದ್ದಕ್ಕೆ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಿದ ದಿನಾಂಕ:

ಪರಂತು, ಲೈಸೆನ್ಸ್‌ದಾರನು, ಪರಿಶೀಲನಾಧಿಕಾರಿಯ ಮನವರಿಕೆಗಾಗಿ (ii) ರಲ್ಲಿನ ವಿವರಗಳನ್ನು ಪ್ರತ್ಯೇಕವಾದ ವಿವರ ಪಟ್ಟಿಯಲ್ಲಿ ಒದಗಿಸಬಹುದು.

(2) 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸ್ ದಾರನಾಗಿರದ ಒಬ್ಬ ವ್ಯಕ್ತಿಯು ಇಡಬೇಕಾದ ಲೆಕ್ಕದ ಪುಸ್ತಕಗಳು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ :

(i) ವಿದ್ಯುಚ್ಛಕ್ತಿ ಉತ್ಪಾದನಾ ಸ್ಥಳ;

(ii) ಅವನು ಸ್ವತಃ ಬಳಸಿಕೊಂಡ ವಿದ್ಯುಚ್ಛಕ್ತಿಯ ಯುನಿಟ್‌ಗಳ ಸಂಖ್ಯೆ ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಮೊತ್ತ;

(ii) ಅವನು ಇತರರಿಗೆ ಸರಬರಾಜು ಮಾಡಿದ ವಿದ್ಯುಚ್ಛಕ್ತಿ ಯುನಿಟ್‌ಗಳ ಸಂಖ್ಯೆ ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ಮತ್ತು ವಸೂಲಿ ಮಾಡಿದ ತೆರಿಗೆಯ ಮೊತ್ತ.

(3) ಯುನಿಟ್‌ಗಳ ಲೆಕ್ಕದ ಪುಸ್ತಕಗಳನ್ನು ತಹಲ್‌ವರೆಗೆ ವ್ಯವಸ್ಥಿಗೊಳಿಸತಕ್ಕದ್ದು.

**5. ವಿವರ ಪಟ್ಟಿಕೆಗಳನ್ನು ಸಲ್ಲಿಸುವುದು.**– ಲೈಸೆನ್ಸುದಾರನು, ಈ ಮುಂದಿನ ವಿವರಗಳನ್ನುಳ್ಳ ಮಾಸಿಕ ವಿವರಪಟ್ಟಿಗಳನ್ನು, ಎಂದರೆ:–

(i) ನಮೂನೆ 'ಬಿ' ಯಲ್ಲಿ ಒಂದು ವಿವರ ಪಟ್ಟಿಕೆ;

(ii) ನಮೂನೆ 'ಸಿ' ಯಲ್ಲಿ ಒಂದು ವಿವರ ಪಟ್ಟಿಕೆ; ಅದು ಈ ಮುಂದಿನ ವಿವರಗಳನ್ನೊಳಗೊಂಡಿರಬೇಕು,–

(ಎ) ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದ ಬಳಕೆದಾರರ ಹೆಸರುಗಳು ಮತ್ತು ವಿಳಾಸಗಳು; ಮತ್ತು

(ಬಿ) 4ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ ವಸೂಲಿಯಾಗದಿರುವ ಪ್ರಕರಣಗಳನ್ನು ಪ್ರತ್ಯೇಕವಾಗಿ ತೋರಿಸಿರಬೇಕು ಅಂಥ ಬಳಕೆದಾರರಿಂದ ಬಾಕಿ ಇರುವ ವಿದ್ಯುಚ್ಛಕ್ತಿ ತೆರಿಗೆಯ ಮೊತ್ತದ ವಿವರ

– ಇವುಗಳನ್ನು ದ್ವಿಪ್ರತಿಯಲ್ಲಿ ವಿವರ ಪಟ್ಟಿಕೆಯನ್ನು ಸಂಬಂಧಿಸಿದ ತಿಂಗಳ ನಂತರದ ತಿಂಗಳ 15ನೇ ದಿನಾಂಕದೊಳಗೆ ಒಂದು ಪ್ರತಿಯನ್ನು ಜಿಲ್ಲೆಯ ಜಿಲ್ಲಾಧಿಕಾರಿಗೆ ಮತ್ತು ಇನ್ನೊಂದನ್ನು ಸರ್ಕಾರದ ವಿದ್ಯುಚ್ಛಕ್ತಿ ಪರಿಶೀಲಕರು ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು:

ಪರಂತು, ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ವಿವರ ಪಟ್ಟಿಕೆಗಳನ್ನು ನಮೂನೆ 'ಬಿ ಮತ್ತು 'ಇ ಯಲ್ಲಿ ತ್ರಿಪತ್ರಿಯಲ್ಲಿ ಸರ್ಕಾರದ ವಿದ್ಯುಚ್ಛಕ್ತಿ ಪರಿಶೀಲಕರಿಗೆ ಸಲ್ಲಿಸತಕ್ಕದ್ದು.

(2) ಲೈಸೆನ್ಸ್‌ದಾರನಾಗಿರದ ವ್ಯಕ್ತಿಯು ನಮೂನೆ 'ಬಿ ಮತ್ತು 'ಡಿ ಯಲ್ಲಿ ಮಾಸಿಕ ವಿವರಪಟ್ಟಿಕೆಗಳನ್ನು (1)ನೇ ಉಪ ನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ಅಧಿಕಾರಿಗಳಿಗೆ ಮತ್ತು ಅಂಥ ಸಮಯಗಳಲ್ಲಿ ಸಲ್ಲಿಸತಕ್ಕದ್ದು.

**6. ಲೆಕ್ಕ ಪುಸ್ತಕಗಳ ಪರಿಶೀಲನೆ.**– ಪರಿಶೀಲನಾಧಿಕಾರಿಯು, ಅಧ್ಯಾದೇಶದ ಅಡಿಯಲ್ಲಿ ವಿಧಿಸಬಹುದಾದ, ವಸೂಲಿ ಮಾಡಿ ರಾಜ್ಯ ಸರ್ಕಾರಕ್ಕೆ ಜಮೆ ಮಾಡಲಾದ ವಿದ್ಯುಚ್ಛಕ್ತಿ ತೆರಿಗೆಯ ಮೊತ್ತವನ್ನು ತಿಳಿದುಕೊಳ್ಳಲು ಅಥವಾ ಸತ್ಯಾಪನೆ ಮಾಡಲು ಪರಿಶೀಲನಾಧಿಕಾರಿಯು ಅವಶ್ಯವೆಂದು ಪರಿಗಣಿಸಬಹುದಾದಂತೆ ಲೈಸೆನ್ಸುದಾರನ ಅಥವಾ ಸಂದರ್ಭಾನುಸಾರ ಲೈಸೆನ್ಸುದಾರನಾಗಿರದ ವ್ಯಕ್ತಿಯ ಕಚೇರಿಯ ಕೆಲಸದ ವೇಳೆಯ ಯಾವುದೇ ಸಮಯದಲ್ಲಿ ಅವನ ಸ್ವಾಧೀನದಲ್ಲಿರುವ ಅಥವಾ ಸಂದರ್ಭಾನುಸಾರ ನಿಯಂತ್ರಣದಲ್ಲಿರುವಂಥ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು

ಪರಿಶೀಲನೆಗಾಗಿ ನೋಂದಾಯಿತ ಅಥವಾ ಇತರ ಕಚೇರಿಯಲ್ಲಿ ಹಾಜರುಪಡಿಸುವಂತೆ ಅವನನ್ನು ಅಗತ್ಯಪಡಿಸಬಹುದು.

**7. ಪರಿಶೀಲನಾಧಿಕಾರಿಗಳ ಪ್ರವೇಶಿಸುವ ಅಧಿಕಾರ.**- ಪರಿಶೀಲನಾಧಿಕಾರಿಯು,-

(i) ಲೈಸೆನ್ಸ್‌ದಾರ ಅಥವಾ ಲೈಸೆನ್ಸುದಾರನಾಗಿರದ ವ್ಯಕ್ತಿಯು ಇಟ್ಟಿರುವ ಲೆಕ್ಕದ ಪುಸ್ತಕಗಳಲ್ಲಿ ನೀಡಲಾಗಿರುವ ವಿವರಗಳನ್ನು ಮತ್ತು ಸಲ್ಲಿಸಿರುವ ವಿವರ ಪಟ್ಟಿಕೆಗಳನ್ನು ಸತ್ಯಾಪನೆ ಮಾಡುವ;

(ii) ಮೀಟರುಗಳನ್ನು ಮತ್ತು ಮೀಟರ್ ಕಾರ್ಡ್‌ಗಳನ್ನು ಪರಿಶೀಲಿಸುವ ಮೂಲಕ ವಿವರ ಪಟ್ಟಿಕೆಗಳಲ್ಲಿ ಮತ್ತು ಲೆಕ್ಕದ ಪುಸ್ತಕಗಳಲ್ಲಿ ನಮೂದಿಸಿರುವಂತೆ ಬಳಸಲಾದ ಅಥವಾ ಸರಬರಾಜು ಮಾಡಲಾದ ವಿದ್ಯುಚ್ಛಕ್ತಿ ಪ್ರಮಾಣವನ್ನು ಪರೀಕ್ಷಿಸುವ;

(iii) ವಿದ್ಯುಚ್ಛಕ್ತಿ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ವಿವರಗಳನ್ನು ಸತ್ಯಾಪನೆ ಮಾಡುವ ಉದ್ದೇಶಕ್ಕಾಗಿ ಲೈಸೆನ್ಸುದಾರನು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದಾನೆ ಅಥವಾ ಮಾಡಿದ್ದಾನೆಂದು ನಂಬಲಾದ ಅಥವಾ ಲೈಸೆನ್ಸುದಾರನಾಗಿರದ ವ್ಯಕ್ತಿಯು ಸರಬರಾಜು ಮಾಡಿದ್ದಾನೆ ಅಥವಾ ಬಳಸಿಕೊಂಡಿದ್ದಾನೆ ಎಂದು ನಂಬಲಾದ ಯಾವುವೇ ಆವರಣಗಳನ್ನು ಪ್ರವೇಶಿಸಬಹುದು.

**8. ಮೀಟರುಗಳನ್ನು ಓದುವುದು.**- (1) ಲೈಸೆನ್ಸುದಾರನು, ಅಧ್ಯಾದೇಶದ ಅಡಿಯಲ್ಲಿ ವಿದ್ಯುಚ್ಛಕ್ತಿ ತೆರಿಗೆಗೆ ಬದ್ಧವಾಗುವ ವಿದ್ಯುಚ್ಛಕ್ತಿಯ ಸಂಬಂಧದಲ್ಲಿ ಪ್ರತಿಯೊಬ್ಬ ಗ್ರಾಹಕನ ಮೀಟರನ್ನು ಆದಷ್ಟು ಬೇಗ ಪ್ರತಿ ತಿಂಗಳ ಅದೇ ದಿನಾಂಕದಂದು ಓದುವಂತೆ ಮಾಡತಕ್ಕದ್ದು ಮತ್ತು ಆ ತಿಂಗಳಲ್ಲಿ ಬಳಸಲಾಗಿರುವ ವಿದ್ಯುಚ್ಛಕ್ತಿ ಯುನಿಟ್‌ಗಳನ್ನು ದಾಖಲುಮಾಡತಕ್ಕದ್ದು. ವಿದ್ಯುಚ್ಛಕ್ತಿ ತೆರಿಗೆಯನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ ಮೀಟರ್ ಸಂಖ್ಯೆಯನ್ನು ದಾಖಲು ಮಾಡಿದ ಅಂಥ ಎರಡು ಕ್ರಮಾನುಗತ ಅವಧಿಗಳ ನಡುವಿನ ಅವಧಿಯನ್ನು ಒಂದು ತಿಂಗಳೆಂದು ಪರಿಗಣಿಸತಕ್ಕದ್ದು.

(2) ಪ್ರತಿಯೊಬ್ಬ ಬಳಕೆದಾರನು, ಮೀಟರುಗಳನ್ನು ಓದುವ ಅಥವಾ ಮೀಟರುಗಳನ್ನು ತಪ್ಪಾಗಿ ಓದುವುದನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ, ಲೈಸೆನ್ಸುದಾರನನ್ನು ಅಥವಾ ಆ ಸಂಬಂಧದಲ್ಲಿ ಅವನು ಲಿಖಿತದಲ್ಲಿ ಪ್ರಾಧಿಕರಿಸಿದ ಯಾರೇ ವ್ಯಕ್ತಿಯನ್ನು ಮೀಟರು ಇದೆಯೆಂದು ಅಥವಾ ಅದನ್ನು ಸ್ಥಾಪಿಸಿದೆಯೆಂದು ನಂಬಲಾದ ಯಾವುದೇ ಆವರಣದೊಳಕ್ಕೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಪ್ರವೇಶಿಸಲು ಅನುಮತಿಸತಕ್ಕದ್ದು.

**9. ಸರಿಹೊಂದಾಣಿಕೆಗಳು ಮತ್ತು ಮರುಪಾವತಿಗಳು.**- (1) ಲೈಸೆನ್ಸುದಾರನು ಮೀಟರುಗಳನ್ನು ವೇಗವಾಗಿ ಮತ್ತು ನಿಧಾನವಾಗಿ ಓಡುವ ಬಗ್ಗೆ ಮತ್ತು ಅವುಗಳು ಮಾಪನವನ್ನು ತಪ್ಪಾಗಿ ತೋರಿಸುವ ಬಗ್ಗೆ ಪರಿಶೀಲನಾಧಿಕಾರಿಗೆ ತಿಳಿಸಿ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ಆ ತಿಂಗಳಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ಹೆಚ್ಚಿಗೆ ವಸೂಲಿ ಮಾಡಿದ್ದಕ್ಕೆ ಲೈಸೆನ್ಸುದಾರನು ಅದನ್ನು ಸತ್ಯಾಪನೆ ಮಾಡಿದ ನಂತರ ನಗದಿನಲ್ಲಿ ಅಥವಾ ಮುಂದಿನ ತಿಂಗಳುಗಳಿಗೆ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡುವ ಮೂಲಕ ಮರುಪಾವತಿ ಮಾಡಬಹುದು.

**10. ಲೈಸೆನ್ಸುದಾರರಾಗಿರದ ವ್ಯಕ್ತಿಗಳಿಗೆ ವಿಶೇಷ ಉಪಬಂಧಗಳು.-** (1) ಪ್ರತಿಯೊಬ್ಬ ಲೈಸೆನ್ಸುದಾರನಾಗಿರದ ವ್ಯಕ್ತಿಯು, ಪರಿಶೀಲನಾಧಿಕಾರಿಯು ಲಿಖಿತದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಅಂಥ ರೀತಿಯಲ್ಲಿ ವಿದ್ಯುಚ್ಛಕ್ತಿ ಮೀಟರುಗಳನ್ನು ಅಳವಡಿಸತಕ್ಕದ್ದು ಮತ್ತು ಅವುಗಳನ್ನು ಎಲ್ಲ ಸಮಯಗಳಲ್ಲಿ ಸುಸ್ಥಿತಿಯಲ್ಲಿ ಇಡತಕ್ಕದ್ದು:

[1][ಪರಂತು, ಲೈಸೆನ್ಸುದಾರನಾಗಿರದ ಒಬ್ಬ ವ್ಯಕ್ತಿಯು, ವಿದ್ಯುತ್ ಮೀಟರುಗಳನ್ನು ಲಭ್ಯವಿಲ್ಲವೆಂದು ಪರಿಶೀಲನಾಧಿಕಾರಿಯು ಪ್ರಮಾಣಪತ್ರ ನೀಡಿದಾಗ, ವಿದ್ಯುತ್ ಮೀಟರುಗಳನ್ನು ಹಾಗೆ ಅಳವಡಿಸುವಂತೆ ಅಗತ್ಯಪಡಿಸತಕ್ಕದ್ದಲ್ಲ.][1]

1. ದಿನಾಂಕ: 14.12.1961ನೇ ಕರ್ನಾಟಕ ರಾಜ್ಯಪತ್ರದ ಭಾಗ 2ಸಿ (i) ರಲ್ಲಿ ಅಧಿಸೂಚನೆ ಸಂ. ಪಿಡಬ್ಲ್ಯೂಡಿ 18 ಇಟಿಎಸ್ 61, ದಿನಾಂಕ 28.11.61ರ ಮೂಲಕ ಸೇರಿಸಲಾಗಿದೆ.

[1][(2) (1)ನೇ ಉಪನಿಯಮದ ಅನುಸಾರ ಲೈಸೆನ್ಸುದಾರನಾಗಿರದ ಒಬ್ಬ ವ್ಯಕ್ತಿಯು ಯಾವುದೇ ವಿದ್ಯುಚ್ಛಕ್ತಿ ಮೀಟರುಗಳನ್ನು ಅಳವಡಿಸದಿದ್ದಲ್ಲಿ, ವಿದ್ಯುಚ್ಛಕ್ತಿ ತೆರಿಗೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ವಿದ್ಯುಚ್ಛಕ್ತಿ ಬಳಕೆಯನ್ನು ಜನರೇಟರ್ ಲೋಡ್ ಸಂಪರ್ಕದ ಒಟ್ಟು ಕಿಲೋವ್ಯಾಟ್‌ಗಳ ಆಧಾರದ ಮೇಲೆ ಮತ್ತು ಕಾರ್ಯನಿರ್ವಹಿಸಿದ ಗಂಟೆಗಳನ್ನು ಲೆಕ್ಕ ಹಾಕಿ ಪರಿಗಣಿಸತಕ್ಕದ್ದು.][1]

1. ದಿನಾಂಕ:14.12.1961 ರ ಕರ್ನಾಟಕ ರಾಜ್ಯಪತ್ರದ ಭಾಗ 2ಸಿ (i) ರಲ್ಲಿ ಅಧಿಸೂಚನೆ ಸಂ. ಪಿಡಬ್ಲ್ಯೂಡಿ 18 ಇಟಿಎಸ್ 61, ದಿನಾಂಕ 28.11.61ರ ಮೂಲಕ ಸೇರಿಸಲಾಗಿದೆ.

[1][(3)][1] ಪರಿಶೀಲಾಧಿಕಾರಿಯು ಮೀಟರುಗಳನ್ನು ಪರಿಶೀಲಿಸುವ ಮತ್ತು ಮೀಟರುಗಳ ನಿರ್ವಹಣೆ ಸರಿಯಾಗಿದೆಯೆ ಎಂಬುದನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ಮತ್ತು (1)ನೇ ಉಪನಿಯಮದ ಅಡಿಯಲ್ಲಿ ತಾನು ನೀಡಿದ ನಿರ್ದೇಶನಗಳನ್ನು ಪಾಲಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಂಥ ಯಾರೇ ವ್ಯಕ್ತಿಯ ಆವರಣವನ್ನು ಪ್ರವೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

[1][(4)][1] (1)ನೇ ಉಪನಿಯಮದ ಅಡಿಯಲ್ಲಿ ಅಳವಡಿಸಲಾಗಿರುವ ಯಾವುದೇ ಮೀಟರಿನ ನಿಖರತೆಯ ಬಗ್ಗೆ ಪರಿಶೀಲನಾಧಿಕಾರಿಗೆ ಸಂದೇಹ ಪಡಲು ಕಾರಣಗಳಿದ್ದಲ್ಲಿ, ಅವನು ಆ ವಿಷಯವನ್ನು ಸರ್ಕಾರದ ವಿದ್ಯುತ್ ಪರಿವೀಕ್ಷಕರು ಬೆಂಗಳೂರು, ಇವರಿಗೆ ಉಲ್ಲೇಖಿಸತಕ್ಕದ್ದು. ವಿದ್ಯುತ್ ಪರಿವೀಕ್ಷಕರು ಅಥವಾ ಅವರಿಂದ ಈ ಸಂಬಂಧದಲ್ಲಿ ಪ್ರತಿನಿಯೋಜಿತರಾದ ಯಾರೇ ವ್ಯಕ್ತಿಯು ಆನಂತರ ಮೀಟರುಗಳನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ಅಂಥ ವ್ಯಕ್ತಿಯ ಆವರಣವನ್ನು ಪ್ರವೇಶಿಸಬಹುದು.

1. ದಿನಾಂಕ:14.12.1961 ರ ಕರ್ನಾಟಕ ರಾಜ್ಯಪತ್ರದ ಭಾಗ 2ಸಿ (i) ರಲ್ಲಿ ಅಧಿಸೂಚನೆ ಸಂ. ಪಿಡಬ್ಲ್ಯೂಇಡಿ 18 ಇಟಿಎಸ್ 61, ದಿನಾಂಕ 28.11.61ರ ಮೂಲಕ (2) ಮತ್ತು (3)ನೇ ಉಪ ನಿಯಮಗಳನ್ನು ಅನುಕ್ರಮವಾಗಿ (3) ಮತ್ತು (4)ನೇ ಉಪ ನಿಯಮ ಎಂಬುದಾಗಿ ಪುನರ್ ಕ್ರಮಾಂಕಗೊಳಿಸಲಾಗಿದೆ.

*ನಮೂನೆ ಎ

ಬಳಕೆದಾರನ ಹೆಸರು: ವಿದ್ಯುತ್ತನ್ನು ಬಳಸಿದ ಉದ್ದೇಶ

ವಿಳಾಸ: ಪ್ರತಿಯೂನಿಟ್‌ಗೆ ತೆರಿಗೆಯ ದರ:

| **ತಿಂಗಳು** | **ಮೀಟರ್ ಓದುವಿಕೆ** | **ಬಳಕೆ** | **ಬಾಕಿ** | |
|---|---|---|---|---|
| | | | **ತೆರಿಗೆ ರೂ. ಪೈ** | **ವಿದ್ಯುತ್ ದರಗಳು ರೂ. ಪೈ** |
| ಜನವರಿ | | | | |
| ಫೆಬ್ರವರಿ | | | | |
| ಮಾರ್ಚ್ | | | | |
| ಏಪ್ರಿಲ್ | | | | |
| ಮೇ | | | | |
| ಜೂನ್ | | | | |
| ಜುಲೈ | | | | |
| ಆಗಸ್ಟ್ | | | | |
| ಸೆಪ್ಟೆಂಬರ್ | | | | |
| ಅಕ್ಟೋಬರ್ | | | | |
| ನವೆಂಬರ್ | | | | |
| ಡಿಸೆಂಬರ್ | | | | |

| **ಬೇಡಿಕೆ** | | **ಒಟ್ಟು** | **ವಸೂಲಿಗಳು** | | **ಷರಾ** |
|---|---|---|---|---|---|
| **ತೆರಿಗೆ** | **ವಿದ್ಯುತ್ ದರಗಳು** | | **ತೆರಿಗೆ** | **ವಿದ್ಯುತ್ ದರಗಳು** | **ಸಂದಾಯ ಮಾಡಿಲ್ಲದ್ದಕ್ಕಾಗಿ ಸಂಪರ್ಕ ತೆಗೆದುಹಾಕಿರುವುದು** |
| **ರೂ.ಪೈ** | **ರೂ.ಪೈ** | **ರೂ.ಪೈ** | **ರೂ.ಪೈ** | **ರೂ.ಪೈ ರೂ. ಪೈ** | |

* ಹಿಂದಿನ ತಿಂಗಳ ಮತ್ತು ಪ್ರಸ್ತುತ ತಿಂಗಳಿನ ಓದುವಿಕೆಯ ನಡುವಿಣ ವ್ಯತ್ಯಾಸವನ್ನು ಇಲ್ಲಿ ನಮೂದಿಸಿ.

[1][ನಮೂನೆ ಬಿ

20 .........ರ.......... ತಿಂಗಳ ಅವಧಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಿದ, ಬಳಸಲಾದ ವಿದ್ಯುಚ್ಛಕ್ತಿ, ಅದರ ಮೇಲೆ ವಿಧಿಸಲಾದ ಮತ್ತು ಸರ್ಕಾರಕ್ಕೆ ಸಂದಾಯ ಮಾಡಿದ ವಿದ್ಯುಚ್ಛಕ್ತಿ ತೆರಿಗೆಯ ಬಗ್ಗೆ ಮಾಹಿತಿಯನ್ನು ತೋರಿಸುವ ಮಾಸಿಕ ವಿವರ ಪಟ್ಟಿ.

| ಕ್ರಮ ಸಂಖ್ಯೆ | ಸರಬರಾಜು ಮಾಡಿದ/ ಬಳಸಲಾದ ಪ್ರಮಾಣ | ಒಟ್ಟು ಯೂನಿಟ್ ಗಳು | ತೆರಿಗೆ ಯಿಂದ ವಿನಾಯಿತಿ ಗೊಂಡ ಯೂನಿಟ್ ಗಳು** | ಒಟ್ಟು ನಿವ್ವಳ ಯೂನಿಟ್ | ಯೂನಿಟ್ ಒಂದಕ್ಕೆ ತೆರಿಗೆ ದರ | ತೆರಿಗೆಯ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |

| ಅನುಮತಿಸಿದ ಹೊಂದಾಣಿಕೆಗಳು ಮತ್ತು ಮರು ಪಾವತಿಗಳು | ವಿದ್ಯುತ್ ಸಂಪರ್ಕ ತಪ್ಪಿಸಿದ್ದಕ್ಕೆ ಸಂಬಂಧಿಸಿದ ಖಾತಾ ಪುಸ್ತಕಗಳು ವರ್ಗಾಯಿಸುವುದು* | ವಿದ್ಯುಚ್ಛಕ್ತಿ ಸಂಪರ್ಕ ತಪ್ಪಿಸಲಾದ ಬಳಕೆದಾರರಿಂದ ಹೆಚ್ಚುವರಿ ವಸೂಲಿಗಳನ್ನು ಸೇರಿಸಿ | ಒಟ್ಟು ತೆರಿಗೆ | ಖಜಾನೆ ಪಾವತಿ ಮಾಡಿದ ಮೊತ್ತದ ವಿವರಗಳು |
|---|---|---|---|---|
| 8 | 9 | 10 | 11 | 12 |

1. 1ಎ. (ಎ) ಬಾಬಿನ ಪ್ರಕಾರ
   ಬಿ. ಹಿಂಬದಿಯಲ್ಲಿರುವ ದೀಪಗಳು, ಪ್ಯಾನ್‌ಗಳು ಇತ್ಯಾದಿಗಳಿಗಾಗಿ

   (ಎ) ಎಲ್ ಟಿ – 1 – (ವಾಣಿಜ್ಯೇತರ ದೀಪಗಳು ಮತ್ತು ಪ್ಯಾನ್‌ಗಳು)
   (ಬಿ) ಎಲ್ ಟಿ–3 (ವಾಣಿಜ್ಯ, ಸಿನಿಮಾಗಳನ್ನು ಹೊರತುಪಡಿಸಿ ಕೈಗಾರಿಕೇತರ)
   (ಸಿ) ಎಲ್ ಟಿ– 7

1. ಬಿ ಹಿಂಬದಿಯಲ್ಲಿರುವ ಬಾಬಿನ ಪ್ರಕಾರ 5000ಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳ ಸಂಬಂಧದಲ್ಲಿ ಅವರಿಗೆ ನೀರು ಸರಬರಾಜಿಗಾಗಿ ಬಳಸಿದ ವಿದ್ಯುತ್‌ಗಾಗಿ
2. ಹಿಂಬದಿಯಲ್ಲಿರುವ 2(ಎ) (ಬಿ) (ಸಿ) (ಡಿ) ಬಾಬುಗಳ ಪ್ರಕಾರ ವಾಣಿಜ್ಯೇತರ ಹೀಟರ್‌ಗಳು, ಪಂಪುಗಳು, ಎಲ್ಲ ಗೃಹ ವಿದ್ಯುತ್, ಕೃಷಿ ಬಳಕೆ ಪಂಪುಗಳು, ಬೀದಿ ದೀಪಗಳು, ಮುಂತಾದವುಗಳಿಗೆ

   (ಎ) ಎಲ್ ಟಿ–2 (ವಾಣಿಜ್ಯೇತರ ಎ.ಇ.ಹೆಚ್ ಹೊರತುಪಡಿಸಿ ಸಂಯೋಜಿತ ಲೈಟಿಂಗ್ ಮತ್ತು ಹೀಟಿಂಗ್).

1. ನಮೂನೆ ಬಿ ಯನ್ನು ಜಿಎಸ್ ಆರ್ 43 ಅಧಿಸೂಚನೆ ಸಂಖ್ಯೆ ಪಿಡಬ್ಲ್ಯುಡಿ 18 ಇಐಜಿ 76, ಬೆಂಗಳೂರು, ದಿನಾಂಕ 21ನೇ ಜನವರಿ 1980ರ ಮೂಲಕ ಪ್ರತಿಯೋಜಿಸಲಾಗಿದೆ.

(ಬಿ) ಎಲ್ ಟಿ – 2 ಎಇಎಚ್ ಸ್ಥಾಪನೆಗಳು
(ಸಿ) ಇಟಿ– 4 ನೀರಾವರಿ ಪಂಪ್ ಸೆಟ್‌ಗಳು
(ಡಿ) ಎಲ್ ಟಿ– 6 ಬೀದಿ ದೀಪಗಳು ಸಾರ್ವಜನಿಕ ದೀಪಗಳು;

3. ಕೈಗಾರಿಕಾ ಚಾಲಿತ ಮತ್ತು ವಿದ್ಯುತ್ ವಾಣಿಜ್ಯ ಹೀಟಿಂಗ್, ಸಿನಿಮಾಗಳು ಇತ್ಯಾದಿಗಳಿಗಾಗಿ ಹಿಂಬಿದಿಯಲ್ಲಿರುವ 3 (ಎ) ಮತ್ತು (ಸಿ) ಬಾಬುಗಳ ಪ್ರಕಾರ.
(ಎ) ಇಟಿ –5 ವಾಣಿಜ್ಯ
(ಬಿ) ಕೈಗಾರಿಕಾ ಟ್ರೇಡಿಂಗ್ ಮತ್ತು ಮೋಟಿವ್ ಪವರ್
(ಸಿ) ಎಲ್‌ಟಿ –3 (ಸಿನಿಮಾಗಳು ಒಳಗೊಂಡಂತೆ ತಾತ್ಕಾಲಿಕ ಸಿನಿಮಾಗಳು.)

4. 2.2 ಕಿ.ವ್ಯಾ ಅಥವಾ ಅದಕ್ಕೂ ಹೆಚ್ಚು ಇರುವ ಕೈಗಾರಿಕಾ ಸ್ಥಾಪನೆಗಳು ಇತ್ಯಾದಿಗಳಿಗಾಗಿ ಹಿಂಬದಿಯಲ್ಲಿರುವ ಬಾಬು ಸಂ. 4(ಐ) (ಸಿ) ಪ್ರಕಾರ
(ಎ) ಹೆಚ್ ಟಿ–1 ಹೆಚ್ ಟಿ–1ಎ ಹೆಚ್ ಟಿ–2
(ಬಿ) ಹೆಚ್ ಟಿ–2 (ಹೈವೋಲ್ಟೇಜ್ ಬಳಕೆದಾರರು ನಿರ್ವಹಿಸುತ್ತಿರುವ ಕಾಲೋನಿಗಳಿಗೆ ಹೆಚ್ಚುವರಿ ಸರಬರಾಜು)
(ಸಿ) ಹೆಚ್ ಟಿ –3 (ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳು)
(ಡಿ) ಇಂಟರ್‌ಸ್ಟೇಟ್ ಸರಬರಾಜುಗಳು;
(ಇ) ಲೈಸೆನ್ಸ್‌ದಾರರು

5. ಬೃಹತ್ ವಿದ್ಯುತ್ ರಾಸಾಯನಿಕ ಮತ್ತು ಎಲೆಕ್ಟ್ರೋಮೆಟಲರ್ಜಿಕಲ್ ಲೋಡುಗಳಿಗಾಗಿ ಹಿಂಬದಿಯಲ್ಲಿರುವ 5ನೇ ಸಂಖ್ಯೆಯ ಬಾಬುಗಳ ಪ್ರಕಾರ ಇತರ ಉದ್ದೇಶಗಳಿಗಾಗಿ

6. ಹಿಂಬದಿಯಲ್ಲಿನ 6, 7, 8 ನೇ ಬಾಬುಗಳ ಪ್ರಕಾರ
(ಎ) ಹೆಚ್ ಟಿ–5
(ಬಿ) ಎಲ್ ಟಿ–8
(ಸಿ) ಎಲ್ ಟಿ–9

7. ಬಳಕೆದಾರರು ತಡವಾಗಿ ಮಾಡಿದ ಸಂದಾಯಗಳ ಮೇಲೆ ಬಡ್ಡಿ
8. ಮಂಡಳಿಯ ನೌಕರರಿಗೆ ಉಚಿತ ವ್ಯವಸ್ಥೆ.
(ಎ) ಎ.ಇ.ಹೆಚ್.
(ಬಿ) ಎ.ಇ.ಹೆಚ್. ಇಲ್ಲದವರು
9. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಛೇರಿಗಳು, ಉಗ್ರಾಣಗಳು, ಕಾರ್ಯಾಗಾರಗಳು, ಇತ್ಯಾದಿಗಳಿಗಾಗಿ;

10. ವಿದ್ಯುತ್ ಕಾಲೋನಿಗಳು ಮತ್ತು ಕಛೇರಿಗಳ ಆವರಣದಲ್ಲಿನ ಬೀದಿ ದೀಪಗಳು, ಅಥವಾ ಯಾರ್ಡ್ ದೀಪಗಳು, ಇತ್ಯಾದಿಗಳಿಗಾಗಿ
11. ತಮ್ಮ ಸ್ವಂತ ಬಳಕೆಗಾಗಿ ಉತ್ಪಾದಿಸುವ ಅಥವಾ ಅದನ್ನು ಇತರ ವ್ಯಕ್ತಿಗಳಿಗೆ ಉಚಿತವಾಗಿ ಸರಬರಾಜು ಮಾಡುವ ಬಳಕೆದಾರರು ಹಿಂಬದಿಯಲ್ಲಿರುವ 9ನೇ ಬಾಬಿನ ಪ್ರಕಾರ.

*ಈ ಬಾಬಿ ನಡಿಯ ವಿವರಗಳನ್ನು ಒದಗಿಸುವ ಅನುಸೂಚಿಯನ್ನು ಈ ವಿವರ ಪಟ್ಟಕೆಗೆ ಲಗತ್ತಿಸತಕ್ಕದ್ದು.
** ವಿನಾಯಿತಿ ಆಧಾರವನ್ನು ತೋರಿಸುವ ವಿವರಪತ್ರವನ್ನು ಈ ವಿವರ ಪಟ್ಟಿಕೆಗೆ ಲಗತ್ತಿಸತಕ್ಕದ್ದು.

**ನಮೂನೆ – ಬಿ ಯ ಹಿಂಬದಿಯಲ್ಲಿರುವ**

| ಬಾಬಿನ ಸಂಖ್ಯೆ | ಬಳಕೆದಾರರ ವರ್ಗ |
|---|---|
| **1** | **2** |
| 1. | (1) (ಎ) ಈ ಮುಂದಿನವುಗಳಿಗಾಗಿ ವಿದ್ಯುಚ್ಛಕ್ತಿ ಸರಬರಾಜು ಪಡೆದ ಗ್ರಾಹಕರ ದೀಪಗಳು, ಪ್ಯಾನ್‌ಗಳು, ರೇಡಿಯೋಗಳು, ಕಾಫಿ ಗ್ರೈಂಡರ್‌ಗಳು; ವಿದ್ಯುತ್ ಶೇವರ್‌ಗಳು, ಮಾಂಸ ಕತ್ತರಿಸುವ ಸಾಧನಗಳು, ಕೂದಲು ಒಣಗಿಸುವ ಯಂತ್ರಗಳಂಥ ಗೃಹೋಪಯೋಗಿ ಸಾಧನಗಳು;<br>(ಎ) ಖಾಸಗಿ ಮನೆಗಳು (ಬಿ) ಕ್ಲಬ್‌ಗಳು (ಸಿ) ಹಾಸ್ಟೆಲುಗಳು (ಡಿ) ಆಸ್ಪತ್ರೆಗಳು (ಇ) ದತ್ತಿ ಸಂಸ್ಥೆಗಳು (ಎಫ್) ಶಾಲೆಗಳು (ಜಿ) ಕಾಲೇಜುಗಳು (ಹೆಚ್) ಪಾಲಿಟೆಕ್ನಿಕ್‌ಗಳು (ಐ) ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳು (ಜೆ) ಅಂಗಡಿಗಳು (ಕೆ) ಕಚೇರಿಗಳು (ಎಚ್) ಹೋಟೆಲುಗಳು, ರೆಸ್ಟೋರೆಂಟ್‌ಗಳು (ಎಂ) ಫೊಟೋಸ್ಟುಡಿಯೋಗಳು (ಎನ್) ಎಕ್ಸರೇ ಸಂಸ್ಥೆಗಳು ಮತ್ತು ಜಾಹೀರಾತು ಸಂಸ್ಥೆಗಳು ಮತ್ತು ಹೊರಗಿನ ದೀಪಾಲಂಕಾರ<br>(ಬಿ) ತಮ್ಮ ನೀರು ಸರಬರಾಜಿಗಾಗಿ ಬಳಸಿದ ವಿದ್ಯುಚ್ಛಕ್ತಿ ಸಂಬಂಧದಲ್ಲಿ 5000ಕ್ಕಿ ಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯತಿಗಳು.<br>(ಸಿ) ಮೇಲೆ (ಎ) ಉಪ ಬಾಬಿನಲ್ಲಿ ವಿವರಿಸಿರುವಂತೆ ಬೀದಿ ದೀಪಗಳು ಸೇರಿದಂತೆ ದೀಪಗಳು ಮತ್ತು ಪ್ಯಾನುಗಳಿಗೆ ಸಗಟು ಸರಬರಾಜು ಇಲ್ಲಿ ಖರೀದಿದಾರನು ಕೈಗಾರಿಕೆಗಳು ಮತ್ತು ಇತರ ಉದ್ದೇಶಗಳಿಗಾಗಿ ಹೈವೋಲ್ಟೇಜ್ ವಿದ್ಯುತ್ತನ್ನು ಖರೀದಿಸುತ್ತಾನೆ ಮತ್ತು ಬಳಕೆದಾರನು ಅವನ ಆವರಣದಲ್ಲಿ ವಿದ್ಯುತ್ ಪ್ರವಾಹ ಮಾರ್ಗಗಳ ಮಾಲಿಕತ್ವ ಹೊಂದಲು ಅನುಮತಿಸಿಲಾಗಿರುತ್ತದೆ. |
| 1 | 2 |
| 2. | (ಎ) ಪ್ರತ್ಯೇಕವಾಗಿ ಮೀಟರು ಅಳವಡಿಸಿದ ವಾಣಿಜ್ಯೇತರ ಹೀಟರ್‌ಗಳು, ಪಂಪುಗಳು, ರೆಫ್ರಿಜರೇಟರ್‌ಗಳು, ಹವಾನಿಯಂತ್ರಕಗಳು ಮತ್ತು ಇತರ ಗೃಹೋಪಯೋಗಿ ವಸ್ತುಗಳು<br>(ಬಿ) ದೀಪಗಳು, ಫ್ಯಾನ್‌ಗಳು, ರೇಡಿಯೋಗಳು ಅನುಮತಿಸಲಾಗಿರುವ ಕಡೆ ಪಂಪುಗಳು, ಹೀಟರುಗಳು, ರೆಫ್ರಿಜರೇಟರುಗಳು ಮುಂತಾದವುಗಳಿಗೆ ಮಿಶ್ರಿತ ಲೋಡ್‌ಗಳಿರುವ ಸರ್ವ ವಿದ್ಯುತ್ ಗೃಹದ ಪ್ರಾಮಾಣಿಕ ಗೃಹ ಬಳಕೆ.<br>(ಸಿ) ಕೃಷಿ ಪಂಪುಗಳು (ಕಡಿಮೆ ಅಥವಾ ಹೆಚ್ಚಿನ ವೋಲ್ಟೇಜಿನ) ಮತ್ತು |

(ಡಿ) ನಗರ ಪಾಲಿಕೆ, ಪುರಸಭೆಗಳು, ತಾಲೂಕು ಮತ್ತು ಇತರ ಸ್ಥಳೀಯ ಮಂಡಳಿಗಳು, ಮುಜರಾಯಿ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳು ನಿರ್ವಹಿಸುವ ಬೀದಿ ದೀಪಗಳು.

**ಗ್ರಾಹಕರ ಪ್ರವರ್ಗಗಳು**

3. (ಎ) ಕಡಿಮೆ ವೋಲ್ಟೇಜ್ ನಲ್ಲಿ ಸರಬರಾಜು ಮಾಡಿದ ಕೈಗಾರಿಕಾ ಚಾಲಕ ಮತ್ತು ಹೀಟಿಂಗ್ ಪವರ್;

(ಬಿ) ವಾಣಿಜ್ಯ ಕುಕ್ಕರ್‌ಗಳು, ಹೀಟರ್‌ಗಳು, ರೆಫ್ರಿಜರೇಟರುಗಳು ಮತ್ತು ಏರ್ ಕಂಡೀಷನರ್ ಸಾಧನಗಳು;

(ಸಿ) ತಾತ್ಕಾಲಿಕ ಸಿನಿಮಾಗಳೂ ಸೇರಿದಂತೆ ಸಿನಿಮಾಗಳು (ಸಿನಿಮಾಗಳಿಗೆ ಸೇರಿದಂತಿರುವ ಬಾರುಗಳು, ಹೋಟೆಲುಗಳು ಅಥವಾ ವಾಸದ ಗೃಹಗಳನ್ನು ಹೊರತುಪಡಿಸಿ)

4. 2.2 ವೋಲ್ಟೇಜ್ ಅಥವಾ ಅದಕ್ಕೂ ಹೆಚ್ಚಿನ ವೋಲ್ಟೇಜ್‌ನಲ್ಲಿ ಕಾರ್ಯನಿರ್ವಹಿಸುವ ಕೇಂದ್ರ ಸರ್ಕಾರದ ಕಾಲಿಕ ಕೈಗಾರಿಕೆಗಳನ್ನು ಹೊರತುಪಡಿಸಿ ಕೈಗಾರಿಕಾ ಸಂಸ್ಥೆಗಳು, ನಗರ ಸಭೆಗಳು, ಬೃಹತ್ ಶಿಕ್ಷಣ ಸಂಸ್ಥೆಗಳು (ಕಾರ್ಯಗಾರಗಳು ಅಥವಾ ಪ್ರಯೋಗಾಲಯಗಳೊಂದಿಗೆ) ಹೋಟೇಲ್‌ಗಳು, ಸಿನಿಮಾ ಸ್ಟುಡಿಯೋಗಳು, ಕೈಗಾರಿಕೇತರ ಕಾರ್ಯಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು.

5. ಬೇಡಿಕೆ ಒಪ್ಪಂದದೊಂದಿಗೆ ಎಲೆಕ್ಟ್ರಿಕ್ ಆರ್ಕ್ ಕುಲುಮೆಗಳನ್ನು ಬಳಸುವಂಥವುಗಳನ್ನು ಒಳಗೊಂಡು ಬೃಹತ್ ಎಲೆಕ್ಟ್ರೋ ಕೆಮಿಕಲ್ ಮತ್ತು ಎಲೆಕ್ಟ್ರೋ ಮೆಟಲರ್ಜಿಕಲ್ ಲೋಡ್‌ಗಳು ;

(ಎ) 6000 ಕೆವಿಎ ನಿಂದ 7,999 ಕೆವಿಎ;

(ಬಿ) 8000 ಕೆವಿಎ ಮತ್ತು ಮೇಲ್ಪಟ್ಟು.

6. 12 ತಿಂಗಳಿಗೆ ಮೀರದ ಅವಧಿಗೆ ತಾತ್ಕಾಲಿಕ ಸಗಟು ಸರಬರಾಜು.

7. ದೀಪಗಳು, ಫ್ಯಾನ್‌ಗಳು, ರೇಡಿಯೋ ರಿಸೀವರ್‌ಗಳು ಮತ್ತು ಇತರ ಸಣ್ಣ ಸಾಧನಗಳಿಗೆ ತಾತ್ಕಾಲಿಕ ವಿದ್ಯುತ್.

8. ತಾತ್ಕಾಲಿಕವಾಗಿ ಕೈಗಾರಿಕಾ ಚಾಲಕ ಮತ್ತು ಹೀಟಿಂಗ್ ಉದ್ದೇಶಕ್ಕಾಗಿ.

9. ಸ್ವಂತ ಬಳಕೆಗಾಗಿ ವಿದ್ಯುತ್ತನ್ನು ಉತ್ಪಾದಿಸುತ್ತಿರುವ ಅಥವಾ ಅದನ್ನು ಉಚಿತವಾಗಿ ಇತರ ವ್ಯಕ್ತಿಗಳಿಗೆ ಸರಬರಾಜು ಮಾಡುವ ಲೈಸೆನ್ಸುದಾರನಾಗಿರದ ಬಳಕೆದಾರರು.

**ನಮೂನೆ “ಸಿ”**

**20 .........ರ....... ತಿಂಗಳ ಅವಧಿಯಲ್ಲಿ ವಿದ್ಯುಚ್ಛಕ್ತಿ ತೆರಿಗೆ ಸಂದಾಯಮಾಡಲು ತಪ್ಪಿರುವ ವಿದ್ಯುತ್ ಬಳಕೆದಾರರ ವಿವರಗಳನ್ನು ತೋರಿಸುವ ಮಾಸಿಕ ವಿವರ ಪಟ್ಟಿ.**

| ಬಳಕೆದಾರರ ಹೆಸರು ವಿಳಾಸ | ನಮೂನೆ ಬಿ ಯ ಹಿಂಬದಿ ಕೊಟ್ಟಿರುವ ಸಂಖ್ಯೆಗಳ ಬಾಬುಗಳಿಗೆ ಸರಬರಾಜು ಮಾಡಿದ/ ಬಳಸಿದ ಯೂನಿಟ್ಟುಗಳ ಸಂಖ್ಯೆ | | | | | | | ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆ |
|---|---|---|---|---|---|---|---|---|
| | ಬಾಬು 1 | ಬಾಬು 2 | ಬಾಬು 3 | ಬಾಬು 4 | ಬಾಬು 5 | ಬಾಬು 6 ಮತ್ತು 7 | ಬಾಬುಗಳು 8 ಮತ್ತು 9 | |
| 1 | 2 | 3 | 4 | 5 | 6 | 7 | 8 | 9 |

| 4ನೇ ಪ್ರಕರಣದ 1ನೇ ಉಪ ಪ್ರಕರಣದ ಅಡಿಯಲ್ಲಿ ವಸೂಲು ಮಾಡಲಾಗದೆ ಉಳಿದಿರುವ ಮೊತ್ತ | ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡಬೇಕಾದ ಅವಧಿ | ಖಾತಾ ಪುಸ್ತಕದ ಲೆಕ್ಕ ಸಂಖ್ಯೆಯ ಉಲ್ಲೇಖ | ಷರಾ (ವಸೂಲಾತಿಗಾಗಿ ಲೈಸೆನ್ಸುದಾರನು ಏನಾದರೂ ಕ್ರಮ ಕೈಕೊಂಡಿದ್ದಲ್ಲಿ, ಅದು) |
|---|---|---|---|
| 10 | 11 | 12 | 13 |

**ನಮೂನೆ “ ಡಿ ”**

**20 .........ರ......ತಿಂಗಳ ಅವಧಿಯಲ್ಲಿ ಲೈಸೆನ್ಸುದಾರನಾಗಿರದ ವ್ಯಕ್ತಿಯು ವಿದ್ಯುತ್ ಸರಬರಾಜು ಮಾಡಿರುವ ಮತ್ತು ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿರುವ ವ್ಯಕ್ತಿಗಳ ವಿವರಗಳನ್ನು ತೋರಿಸುವ ಮಾಸಿಕ ವಿವರ ಪಟ್ಟಿ.**

| ವಿದ್ಯುತ್ ಸರಬರಾಜು ಮಾಡಲಾದ ವ್ಯಕ್ತಿಯ ಹೆಸರು ಮತ್ತು ವಿಳಾಸ | ಸರಬರಾಜು ಮಾಡಲಾದ ವಿದ್ಯುಚ್ಛಕ್ತಿ ಯೂನಿಟ್ | ಸಂದಾಯ ಮಾಡ ಬೇಕಾಗಿರುವ ವಿದ್ಯುಚ್ಛಕ್ತಿ ತೆರಿಗೆಯ ಮೊತ್ತ | ವಿದ್ಯುಚ್ಛಕ್ತಿ ತೆರಿಗೆ ಸಂದಾಯ ಮಾಡಬೇಕಾದ ಅವಧಿ | ಪುಸ್ತಕದಲ್ಲಿ ಲೆಕ್ಕ ಸಂಖ್ಯೆಯ ಉಲ್ಲೇಖ | ಷರಾ (ಲೈಸೆನ್ಸುದಾರನಾಗಿರುವ ವ್ಯಕ್ತಿಯು ವಸೂಲಾತಿಗಾಗಿ ಯಾವುದಾದರೂ ಕ್ರಮ ಕೈಗೊಂಡಿದ್ದಲ್ಲಿ ಅದು) |
|---|---|---|---|---|---|
| 1 | 2 | 3 | 4 | 5 | 6 |
| | | | | | |

**ನಮೂನೆ “ಇ”**

**20 .........ರ......ತಿಂಗಳಿಗಾಗಿ ............ವಿಭಾಗದ ತೆರಿಗೆಯ ತಗಾದೆ ವಸೂಲಿ ಮತ್ತು ಬಾಕಿ ಇವುಗಳನ್ನು ತೋರಿಸುವ ವಿವರ ಪಟ್ಟಿ.**

| ಕ್ರಮ ಸಂಖ್ಯೆ | ವಿಭಾಗದ ಹೆಸರು | ಪ್ರಾರಂಭಿಕ ಶಿಲ್ಕು | ಬೇಡಿಕೆ | ಒಟ್ಟು | ವಸೂಲಿ | ಮುಕ್ತಾಯ ಶಿಲ್ಕು | ಷರಾ |
|---|---|---|---|---|---|---|---|
| | | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | ರೂ.ಪೈ | |
| | ಒಟ್ಟು | | | | | | |

**ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ)**

**(ತಿದ್ದುಪಡಿ) ನಿಯಮಗಳು, 1961**

ಭಾಗ –IV

**ಪ್ರಕರಣ 2ಸಿ (i)**

**ಶಾಸನಬದ್ಧ ನಿಯಮಗಳು**

**ಅಧಿಸೂಚನೆ**

**ಸಂಖ್ಯೆ ಪಿಡಬ್ಲ್ಯುಡಿ 18 ಇಟಿಎಸ್ 61, ದಿನಾಂಕ ಬೆಂಗಳೂರು, 28ನೇ ನವೆಂಬರ್ 61,**

**ಮಾರ್ಗಶಿರ 7, ಶಕ ವರ್ಷ 1889.**

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 14) 10ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959ಕ್ಕೆ ಈ ಮುಂದಿನ ತಿದ್ದುಪಡಿಗಳನ್ನು ಮಾಡುತ್ತದೆ, ಎಂದರೆ :–

**ತಿದ್ದುಪಡಿ**

ಸದರಿ ನಿಯಮಗಳಲ್ಲಿ :–

1. 10ನೇ ನಿಯಮದಲ್ಲಿ,–

(i) (1) ನೇ ಉಪನಿಯಮಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಲೈಸೆನ್ಸುದಾರನಾಗಿರದ ಒಬ್ಬ ವ್ಯಕ್ತಿಯು, ವಿದ್ಯುತ್ ಮೀಟರುಗಳು ದೊರೆಯದೇ ಇರುವ ಕಾರಣದಿಂದ ಪರಿಶೀಲನಾಧಿಕಾರಿಯು, ಅದಕ್ಕೆ ಸಂಬಂಧಪಟ್ಟಂತೆ ಪ್ರಮಾಣಪತ್ರ ನೀಡಿದರೆ, ವಿದ್ಯುತ್ ಮೀಟರನ್ನು ಅಳವಡಿಸುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

(ii) (1)ನೇ ಉಪನಿಯಮದ ನಂತರ ಈ ಮುಂದಿನ (2)ನೇ ಉಪನಿಯಮವನ್ನು ಸೇರಿಸತಕ್ಕದ್ದು ಮತ್ತು ಈಗಿರುವ (2)ನೇ ಉಪನಿಯಮವೆಂದು ಮರು ಅಂಕಿತಗೊಳಿಸತಕ್ಕದ್ದು, ಎಂದರೆ:–

(2) (1)ನೇ ಉಪನಿಯಮದ ಅನುಸಾರವಾಗಿ ಲೈಸೆನ್ಸುದಾರನಾಗಿರದ ಒಬ್ಬ ವ್ಯಕ್ತಿಯು ಯಾವುದೇ ವಿದ್ಯುತ್ ಮೀಟರನ್ನು ಅಳವಡಿಸದಿದ್ದಲ್ಲಿ ವಿದ್ಯುಚ್ಛಕ್ತಿ ತೆರಿಗೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ, ಕಿಲೋವ್ಯಾಟುಗಳಲ್ಲಿ ಜನರೇಟರಿಗೆ ಒಟ್ಟಾರೆ ಸಂಪರ್ಕ ಕಲ್ಪಿಸಿದ ಲೋಡಿನ ಮತ್ತು ಕಾರ್ಯಚರಣೆಯ ಗಂಟೆಗಳ ಸಂಖ್ಯೆಯ ಆಧಾರದ ಮೇಲೆ ಬಳಕೆ ಮಾಡಿದ ವಿದ್ಯುಚ್ಛಕ್ತಿಯನ್ನು ಲೆಕ್ಕ ಹಾಕತಕ್ಕದ್ದು.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಕೆ. ಪ್ರಭಾಕರ್ ರಾವ್
ಸರ್ಕಾರದ ಉಪ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

**[1][ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ನಿಯಮಗಳು, 1978**

**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಅಧಿಸೂಚನೆ ಸಂ. ಪಿಡಬ್ಲ್ಯುಡಿ 25 ಇಐಜಿ 75**

**ಬೆಂಗಳೂರು, ದಿನಾಂಕ 5ನೇ ಅಗಸ್ಟ್ 1978**

**ಜಿ.ಎಸ್.ಆರ್ 254.**– ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 14) 10ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**1. ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ನಿಯಮಗಳು, 1978 ಎಂದು ಕರೆಯತಕ್ಕದ್ದು.

(2) ಇವು ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ನಿಯಮದ ತಿದ್ದುಪಡಿ.**– 1959ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು ಇದರ 3ನೇ ನಿಯಮದಲ್ಲಿ,–

(ಎ) (1)ನೇ ಉಪನಿಯಮದಲ್ಲಿ ಎರಡನೇ ವಾಕ್ಯಕ್ಕೆ ಮತ್ತು ಅದರ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

ಒಂದು ತಿಂಗಳಲ್ಲಿ ಅವನು ಹಾಗೆ ವಸೂಲಿ ಮಾಡಿದ ತೆರಿಗೆ ಸಂಬಂಧದಲ್ಲಿ ಲೈಸೆನ್ಸ್‌ದಾರನು ಸರ್ಕಾರದ ಒಂದು ಖಜಾನೆಗೆ,–

(ಎ) ಹಿಂದಿನ 12 ತಿಂಗಳುಗಳ ಅವಧಿಯಲ್ಲಿ ಅವನು ಸಂದಾಯ ಮಾಡಿದ ಮಾಸಿಕ ಸರಾಸರಿ ತೆರಿಗೆಗೆ ಸಮನಾದ ಮೊತ್ತವನ್ನು ಪ್ರತಿ ತಿಂಗಳ ಅವಧಿಯು ಮುಗಿದ ನಂತರ ಎರಡು ತಿಂಗಳ ಒಳಗೆ, ಮತ್ತು

(ಬಿ) (ಎ) ಖಂಡದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊತ್ತ ಮತ್ತು ಆ ತಿಂಗಳಲ್ಲಿ ವಾಸ್ತವವಾಗಿ ವಸೂಲಿ ಮಾಡಲಾದ ತೆರಿಗೆಯ ನಡುವಿನ ವ್ಯತ್ಯಾಸಕ್ಕೆ ಸಮನಾದ ಒಂದು ಮೊತ್ತವನ್ನು ಸದರಿ ಎರಡು ತಿಂಗಳುಗಳ ಅವಧಿಯು ಮುಕ್ತಾಯವಾದ ತರುವಾಯ ಒಂದು ತಿಂಗಳೊಳಗೆ ಜಮೆ ಮಾಡತಕ್ಕದ್ದು.

(ಬಿ) (2)ನೇ ಉಪನಿಯಮದ ನಂತರ, ಈ ಮುಂದಿನ ಉಪನಿಯಮವನ್ನು ಸೇರಿತಕ್ಕದ್ದು ಎಂದರೆ:–

(3) ಲೈಸೆನ್ಸುದಾರನಾಗಿರುವ ಅಥವಾ ಸಂದರ್ಭಾನುಸಾರ ಲೈಸೆನ್ಸುದಾರನಾಗಿರದ ವ್ಯಕ್ತಿಯು (1)ನೇ ಉಪ ನಿಯಮ ಮತ್ತು (2) ಉಪನಿಯಮದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಸಂದಾಯ ಮಾಡಬೇಕಾಗಿರುವ ವಿದ್ಯುಚ್ಛಕ್ತಿ ತೆರಿಗೆಯನ್ನು ಸಂದಾಯ ಮಾಡದಿದ್ದಲ್ಲಿ, 7ನೇ ಪ್ರಕರಣದ (i)ನೇ ಉಪ ಪ್ರಕರಣದ ಅಡಿಯಲ್ಲಿ ಸರ್ಕಾರವು ತತ್ಕಾಲದಲ್ಲಿ ಗೊತ್ತುಪಡಿಸಿದ ದರದಲ್ಲಿ ವಿಳಂಬ ಅವಧಿಗೆ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಡಬ್ಲ್ಯು. ಸಿ. ಷಡಕ್ಷರ ದೇವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

1. ದಿನಾಂಕ: 17.8.1978 ರ ಕರ್ನಾಟಕ ರಾಜ್ಯಪತ್ರದ ಭಾಗ IV – 2 ಸಿ (i) ರಲ್ಲಿ ಪುಟ 353 ರಲ್ಲಿ ಪ್ರಕಟವಾಗಿದೆ.

[1] [**ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯ**

**ಅಧಿಸೂಚನೆ ಸಂ. ಪಿಡಬ್ಲ್ಯುಡಿ 18 ಇಐಜಿ 76**

**ಬೆಂಗಳೂರು, ದಿನಾಂಕ 21ನೇ ಜನವರಿ 1980.**

**ಜಿ.ಎಸ್.ಆರ್ 43.**– ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 14) 10ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ನಿಯಮಗಳು, 1959 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ:–

**1. ಶೀರ್ಷಿಕೆ ಮತ್ತು ಪ್ರಾರಂಭ.**– (1) ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ನಿಯಮಗಳು, 1979 ಎಂದು ಕರೆಯತಕ್ಕದ್ದು.

(2) ಇವು ಕೂಡಲೇ ಜಾರಿಗೆ ಬರತಕ್ಕದ್ದು.

**2. ನಮೂನೆ ಬಿ ಯ ತಿದ್ದುಪಡಿ.**– 1959ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ ನಿಯಮಗಳು ಇದರ 3ನೇ ನಿಯಮಗಳಲ್ಲಿ, ನಮೂನೆ "ಬಿ" ಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

**ನಮೂನೆ ಬಿ**

**20 .........ರ......ತಿಂಗಳ ಅವಧಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡಿದ, ಬಳಸಲಾದ ವಿದ್ಯುಚ್ಛಕ್ತಿ, ಅದರ ಮೇಲೆ ವಿಧಿಸಲಾದ ಮತ್ತು ಸರ್ಕಾರಕ್ಕೆ ಸಂದಾಯ ಮಾಡಿದ ವಿದ್ಯುಚ್ಛಕ್ತಿ ತೆರಿಗೆಯ ಬಗ್ಗೆ ಮಾಹಿತಿಯನ್ನು ತೋರಿಸುವ ಮಾಸಿಕ ವಿವರ ಪಟ್ಟಿ.**

| ಕ್ರಮ ಸಂಖ್ಯೆ | ಸರಬರಾಜು ಮಾಡಿದ/ ಬಳಸಲಾದ ಪ್ರಮಾಣ | ಒಟ್ಟು ಯೂನಿಟ್‌ಗಳು | ತೆರಿಗೆ ವಿನಾಯಿತಿ ಪಡೆದ ಯೂನಿಟ್‌ಗಳು | ಒಟ್ಟು ನಿವ್ವಳ ಯೂನಿಟ್‌ಗಳು | ಪ್ರತಿ ಯೂನಿಟ್ ತೆರಿಗೆ ದರ | ತೆರಿಗೆಯ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |

| ಅನುಮತಿಸಲಾದ ಪಾವತಿ ಹೊಂದಾಣಿಕೆಗಳು ಮತ್ತು ಮರು ಪಾವತಿಗಳು | ಸ್ಥಗಿತಗೊಳಿಸಿದ ಖಾತಾ ಪುಸ್ತಕಗಳಿಗೆ ವರ್ಗಾವಣೆಗಳು | ವಿದ್ಯುಚ್ಛಕ್ತಿ ಸಂಪರ್ಕ ತಪ್ಪಿಸಲಾದ ಬಳಕೆದಾರರಿಂದ ಮಾಡಿದ ವಸೂಲಿಗಳನ್ನು ಸೇರಿಸಿ | ಒಟ್ಟು ತೆರಿಗೆ | ಖಜಾನೆಗೆ ಪಾವತಿ ಮಾಡಿದ ಮೊತ್ತದ ವಿವರಗಳು |
|---|---|---|---|---|
| 8 | 9 | 10 | 11 | 12 |

1ಎ. ದೀಪಗಳು, ಫ್ಯಾನ್‌ಗಳು, ಇತ್ಯಾದಿಗಳಿಗಾಗಿ

ಬಿ ಹಿಂಬದಿಯಲ್ಲಿರುವ (ಎ) ಬಾಬಿನ ಪ್ರಕಾರ

(ಎ) ಎಲ್ ಟಿ–1– (ವಾಣಿಜ್ಯೇತರ ದೀಪಗಳು

ಮತ್ತು ಪ್ಯಾನ್‌ಗಳು)

(ಬಿ) ಎಲ್ ಟಿ- 3 (ವಾಣಿಜ್ಯ, ಸಿನಿಮಾಗಳನ್ನು ಹೊರತುಪಡಿಸಿ ಕೈಗಾರಿಕೇತರ)

(ಸಿ) ಎಲ್ ಟಿ- 7

1ಬಿ. 5000ಕ್ಕೂ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳ ಸಂಬಂಧದಲ್ಲಿ ಅವರಿಗೆ ನೀರು ಸರಬರಾಜಿಗಾಗಿ ಬಳಸಲಾದ ವಿದ್ಯುತ್‌ಗಾಗಿ (ಬಿ) ಹಿಂಬದಿಯಲ್ಲಿರುವ ಬಾಬಿನ ಪ್ರಕಾರ.

1. ದಿನಾಂಕ 21.2.1980 ಕರ್ನಾಟಕ ರಾಜ್ಯಪತ್ರದ ಭಾಗ IV - 2 ಸಿ (i) ರಲ್ಲಿ 86 ರಿಂದ 90ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

2. ವಾಣಿಜ್ಯೇತರ ಹೀಟರ್‌ಗಳು, ಪಂಪುಗಳು, ಸರ್ವ ವಿದ್ಯುತ್ ಗೃಹ, ಕೃಷಿ ಬಳಕೆ ಪಂಪುಗಳು, ಬೀದಿ ದೀಪಗಳು, ಮುಂತಾದವುಗಳಿಗೆ ಹಿಂಬದಿಯಲ್ಲಿರುವ 2(ಎ) (ಬಿ) (ಸಿ) (ಡಿ) ಬಾಬುಗಳ ಪ್ರಕಾರ;

(ಎ) ಎಲ್ ಟಿ-2 (ವಾಣಿಜ್ಯೇತರ ಎ.ಇ.ಹೆಚ್ ಹೊರತುಪಡಿಸಿ ಸಂಯೋಜಿತ ಲೈಟಿಂಗ್ ಮತ್ತು ಹೀಟಿಂಗ್)

(ಬಿ) ಎಲ್ ಟಿ-2 ಎಇಎಚ್ ಸ್ಥಾಪನೆಗಳು

(ಸಿ) ಇಟಿ- 4 ನೀರಾವರಿ ಪಂಪ್ ಸೆಟ್‌ಗಳು

(ಡಿ) ಎಲ್ ಟಿ-6 ಬೀದಿ ದೀಪಗಳು ಸಾರ್ವಜನಿಕ ದೀಪಗಳು.

3. ಕೈಗಾರಿಕಾ ಚಾಲಿತ ಮತ್ತು ವಿದ್ಯುತ್ ವಾಣಿಜ್ಯ ಹೀಟಿಂಗ್, ಸಿನಿಮಾಗಳು ಇತ್ಯಾದಿಗಳಿಗೆ ಹಿಂಬದಿಯಲ್ಲಿರುವ 3 (ಎ) (ಬಿ) ಮತ್ತು (ಸಿ) ಬಾಬುಗಳ ಪ್ರಕಾರ

(ಎ) ಇಟಿ-5 ವಾಣಿಜ್ಯ ಮತ್ತು

(ಬಿ) ಕೈಗಾರಿಕಾ ಹೀಟಿಂಗ್ ಮತ್ತು ಚಾಲಿತ ವಿದ್ಯುತ್ ಶಕ್ತಿ

(ಸಿ) ಎಲ್ ಟಿ- 3 (ತಾತ್ಕಾಲಿಕ ಸಿನಿಮಾಗಳು ಸೇರಿದಂತೆ ಸಿನಿಮಾಗಳು).

4. 2.2 ಕಿ.ವ್ಯಾ ಅಥವಾ ಅದಕ್ಕೂ ಹೆಚ್ಚು ಇರುವ ಕೈಗಾರಿಕಾ ಸ್ಥಾಪನೆಗಳು ಇತ್ಯಾದಿಗಳಿಗೆ ಹಿಂಬದಿಯಲ್ಲಿರುವ ಬಾಬು

ಸಂ. (4) (i) (ಸಿ) ಬಾಬಿನ ಪ್ರಕಾರ

(ಎ) ಹೆಚ್ ಟಿ - 1 ಹೆಚ್ ಟಿ - 1 ಎ ಹೆಚ್ ಟಿ - 2

(ಬಿ) ಹೆಚ್ ಟಿ - 4 (ಹೈವೋಲ್ಟೇಜ್ ಬಳಕೆದಾರರು ನಿರ್ವಹಿಸುತ್ತಿರುವ ಕಾಲೋನಿಗಳಿಗೆ ಹೆಚ್ಚುವರಿ ಸರಬರಾಜು)

(ಸಿ) ಹೆಚ್ ಟಿ - 3 (ಗ್ರಾಮೀಣ ವಿದ್ಯುತ್ ಸಹಕಾರಿ ಸಂಘಗಳು)

(ಡಿ) ಅಂತರರಾಜ್ಯ ಸರಬರಾಜು;

(ಇ) ಲೈಸೆನ್ಸ್‌ದಾರರು.

5. ಬೃಹತ್ ವಿದ್ಯುತ್ ರಾಸಾಯನಿಕ ಮತ್ತು ಎಲೆಕ್ಟ್ರೋ ಮೆಟಲರ್ಜಿಕಲ್ ಲೋಡುಗಳಿಗಾಗಿ ಹಿಂಬದಿಯಲ್ಲಿರುವ 5ನೇ ಸಂಖ್ಯೆಯ ಬಾಬುಗಳ ಪ್ರಕಾರ
6. ಇತರ ಉದ್ದೇಶಗಳಿಗಾಗಿ ಹಿಂಬದಿಯಲ್ಲಿರುವ 6, 7, 8ನೇ ಬಾಬುಗಳ ಪ್ರಕಾರ
   (ಎ) ಹೆಚ್ ಟಿ – 5
   (ಬಿ) ಎಲ್ ಟಿ– 8
   (ಸಿ) ಎಲ್ ಟಿ– 9.
7. ಬಳಕೆದಾರರು ತಡವಾಗಿ ಮಾಡಿದ ಸಂದಾಯಗಳ ಮೇಲೆ ಬಡ್ಡಿ.
8. ಮಂಡಳಿಯ ನೌಕರರಿಗೆ ಉಚಿತ ದೀಪ ವ್ಯವಸ್ಥೆ
   (ಎ) ಎ.ಇ. ಹೆಚ್
   (ಬಿ) ಎ.ಇ.ಹೆಚ್ ಇಲ್ಲದವರು.
9. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಕಚೇರಿಗಳು, ಉಗ್ರಾಣಗಳು, ಕಾರ್ಯಗಾರಗಳು, ಇತ್ಯಾದಿ.
10. ವಿದ್ಯುತ್ ಕಾಲೋನಿಗಳು ಮತ್ತು ಕಚೇರಿಗಳ ಆವರಣದಲ್ಲಿ ಬೀದಿ ದೀಪಗಳು, ಅಥವಾ ಯಾರ್ಡ್ ದೀಪಗಳು, ಇತ್ಯಾದಿ.
11. ತಮ್ಮ ಸ್ವಂತ ಬಳಕೆಗಾಗಿ ಉತ್ಪಾದಿಸುವ ಅಥವಾ ಅದನ್ನು ಇತರ ವ್ಯಕ್ತಿಗಳಿಗೆ ಉಚಿತವಾಗಿ ಸರಬರಾಜು ಮಾಡುವ ಬಳಕೆದಾರರು ಹಿಂಬದಿಯಲ್ಲಿರುವ 9ನೇ ಬಾಬಿನ ಪ್ರಕಾರ.

* ಈ ಬಾಬಿನ ಅಡಿಯ ವಿವರಗಳನ್ನು ಒದಗಿಸುವ ಅನುಸೂಚಿಯನ್ನು ಈ ವಿವರ ಪಟ್ಟಿಕೆಗೆ ಲಗತ್ತಿಸತಕ್ಕದ್ದು.
(*) ವಿನಾಯಿತಿಗೆ ಆಧಾರವನ್ನು ತೋರಿಸುವ ವಿವರಪತ್ರವನ್ನು ಈ ವಿವರ ಪಟ್ಟಿಕೆಗೆ ಲಗತ್ತಿಸತಕ್ಕದ್ದು.

**ನಮೂನೆ – ಬಿ ಯ ಹಿಂಬದಿ**

| **ಬಾಬಿನ ಸಂಖ್ಯೆ** | **ಬಳಕೆದಾರರ ವರ್ಗ** |
|---|---|
| 1 | 2 |

1. (1) (ಎ) ಲೈಟುಗಳು, ಫ್ಯಾನ್‌ಗಳು, ರೇಡಿಯೋಗಳು, ಕಾಫಿ ಗ್ರೈಂಡರ್‌ಗಳು; ವಿದ್ಯುತ್ ಶೇವರ್‌ಗಳು ಮಾಂಸದ ಚಾಪರ್‌ಗಳು, ಕೂದಲು ಒಣಗಿಸುವ ಯಂತ್ರಗಳಂಥ ಗೃಹೋಪಯೋಗಿ ಸಾಧನಗಳು ಇವುಗಳನ್ನು
   (ಎ) ಖಾಸಗಿ ಮನೆಗಳು (ಬಿ) ಕ್ಲಬ್‌ಗಳು (ಸಿ) ಹಾಸ್ಟೆಲುಗಳು (ಡಿ) ಆಸ್ಪತ್ರೆಗಳು (ಇ) ದತ್ತಿ ಸಂಸ್ಥೆಗಳು (ಎಫ್) ಶಾಲೆಗಳು (ಜಿ) ಕಾಲೇಜಿಗಳು (ಹೆಚ್) ಪಾಲಿಟಿಕ್ನಿಕ್‌ಗಳು (ಐ) ದೇವಸ್ಥಾನಗಳು,

ಮಸೀದಿಗಳು, ಚರ್ಚ್‌ಗಳು ಮತ್ತು ಇತರ ಧಾರ್ಮಿಕ ಸಂಸ್ಥೆಗಳು (ಜೆ) ಅಂಗಡಿಗಳು (ಕೆ) ಕಚೇರಿಗಳು (ಎಚ್) ಹೋಟೆಲುಗಳು, ರೆಸ್ಟೋರೆಂಟ್‌ಗಳು (ಎಂ) ಫೋಟೋಗ್ರಾಫಿಕ್ ಸ್ಟುಡಿಯೋಗಳು (ಎನ್) ಎಕ್ಸ್‌ರೇ ಸಂಸ್ಥೆಗಳು ಮತ್ತು ಜಾಹೀರಾತು ಸಂಸ್ಥೆಗಳು ಮತ್ತು ಹೊರಗಿನ ದೀಪಾಲಂಕಾರಗಳು ಇಲ್ಲಿ ಸರಬರಾಜು ಪಡೆದ ಬಳಕೆದಾರರು.

(ಬಿ) 5000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳ ಅವುಗಳ ನೀರು ಸರಬರಾಜಿಗಾಗಿ ಬಳಸಿದ ವಿದ್ಯುಚ್ಛಕ್ತಿ ಸಂಬಂಧದಲ್ಲಿ.

(ಸಿ) ಮೇಲೆ (ಎ) ಉಪ ಬಾಬಿನಲ್ಲಿ ವಿವರಿಸಿರುವಂತೆ ಬೀದಿ ದೀಪಗಳು ಸೇರಿದಂತೆ ಲೈಟುಗಳು ಮತ್ತು ಫ್ಯಾನುಗಳಿಗೆ ಹೆಚ್ಚುವರಿ ಸರಬರಾಜು ಇಲ್ಲಿ ಕೈಗಾರಿಕೆಗಳು ಮತ್ತು ಇತರ ಉದ್ದೇಶಗಳಿಗಾಗಿ ಹೈವೋಲ್ಟೇಜ್ ವಿದ್ಯುತ್ತಿನ ಖರೀದಿಗೆ ಮತ್ತು ಬಳಕೆದಾರನು ಅವನ ಆವರಣದಲ್ಲಿ ಮಾಲೀಕತ್ವ ಹೊಂದಲು ಅನುಮತಿಸಿರುವ ಹಂಚಿಕೆಯ ಲೈನುಗಳಿಗೆ ಖರೀದಿ ಅಧಿಕಾರ.

2. (ಎ) ವಾಣೀಜ್ಯೇತರ ಹೀಟರ್‌ಗಳು, ಪಂಪುಗಳು, ರೆಫ್ರಿಜರೇಟರ್‌ಗಳು, ಏರ್‌ಕಂಡೀಷನರ್‌ಗಳು ಮತ್ತು ಇತರ ಗೃಹೋಪಯೋಗಿ ವಸ್ತುಗಳಿಗೆ ಪ್ರತ್ಯೇಕವಾಗಿ ಮೀಟರು ಹಾಕಲಾದ ಮತ್ತು

(ಬಿ) ಲೈಟುಗಳು, ಫ್ಯಾನುಗಳು, ರೇಡಿಯೋಗಳು ಅನುಮತಿಸಲಾಗಿರುವ ಪಂಪುಗಳು, ಹೀಟರುಗಳು, ರೆಫ್ರಿಜರೇಟರುಗಳು ಮುಂತಾದವುಗಳಿಗೆ ಮಿಶ್ರಿತ ಲೋಡ್‌ಗಳಿರುವ ಸರ್ವ ವಿದ್ಯುತ್ ಗೃಹದ ಪ್ರಾಮಾಣಿಕ ಗೃಹ ಬಳಕೆ.

(ಸಿ) ಕೃಷಿ ಪಂಪುಗಳು (ಕಡಿಮೆ ಅಥವಾ ಹೆಚ್ಚಿನ ವೋಲ್ಟೇಜಿನ) ಮತ್ತು

(ಡಿ) ನಗರ ಪಾಲಿಕೆ, ಪುರಸಭೆಗಳು, ತಾಲ್ಲೂಕು ಮತ್ತು ಇತರ ಸ್ಥಳೀಯ ಮಂಡಳಿಗಳು, ಮುಜರಾಯಿ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳು ನಿರ್ವಹಿಸುವ ಬೀದಿ ದೀಪಗಳು;

**ಗ್ರಾಹಕರ ಪ್ರವರ್ಗಗಳು**

| 1 | 2 |
|---|---|

3. (ಎ) ಕಡಿಮೆ ವೋಲ್ಟೇಜ್‌ನಲ್ಲಿ ಸರಬರಾಜು ಮಾಡಿದ ಕೈಗಾರಿಕಾ ಚಾಲಿತ ಮತ್ತು ಹೀಟಿಂಗ್ ಪವರ್ ;

(ಬಿ) ವಾಣಿಜ್ಯ ಕುಕ್ಕರ್‌ಗಳು, ಹೀಟರ್‌ಗಳು, ರೆಫ್ರಿಜರೇಟರುಗಳು ಮತ್ತು ಏರ್ ಕಂಡೀಷನರ್ ಸಾಧನಗಳು;

(ಸಿ) ತಾತ್ಕಾಲಿಕ ಸಿನಿಮಾಗಳೂ ಸೇರಿದಂತೆ ಸಿನಿಮಾಗಳು (ಸಿನಿಮಾಗಳಿಗೆ ಸೇರಿದಂತಿರುವ ಬಾರುಗಳು, ಹೋಟೆಲುಗಳು ಅಥವಾ ವಾಸದ ಗೃಹಗಳನ್ನು ಹೊರತುಪಡಿಸಿ)

4. 2.2. ವೋಲ್ಟೇಜ್ ಅಥವಾ ಅದಕ್ಕೂ ಹೆಚ್ಚಿನ ವೋಲ್ಟೇಜ್ ನಲ್ಲಿ ಕಾರ್ಯ ನಿರ್ವಹಿಸುವ ಕೇಂದ್ರ ಸರ್ಕಾರದ ಕಾಲಿಕ ಕೈಗಾರಿಕೆಗಳನ್ನು ಹೊರತುಪಡಿಸಿ ಕೈಗಾರಿಕಾ ಸಂಸ್ಥೆಗಳು, ನಗರ ಸಭೆಗಳು, ಬೃಹತ್ ಶಿಕ್ಷಣ ಸಂಸ್ಥೆಗಳು (ಕಾರ್ಯಗಾರಗಳು ಅಥವಾ ಪ್ರಯೋಗಾಲಯಗಳೊಂದಿಗೆ) ಹೋಟೆಲ್‌ಗಳು, ಸಿನಿಮಾ ಸ್ಟುಡಿಯೋಗಳು, ಕೈಗಾರಿಕೇತರ ಕಾರ್ಯಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು.

5. ಒಪ್ಪಂದದ ಷರತ್ತಿನೊಂದಿಗೆ ಎಲೆಕ್ಟ್ರಿಕ್ ಆರ್ಕ್ ಕುಲುಮೆಗಳನ್ನು ಬಳಸುವಂಥವುಗಳನ್ನು ಒಳಗೊಂಡು ಬೃಹತ್ ಎಲೆಕ್ಟ್ರೋ ಕೆಮಿಕಲ್ ಮತ್ತು ಎಲೆಕ್ಟ್ರೋ ಮೆಟಲರ್ಜಿಕಲ್ ಲೋಡ್‌ಗಳು;

(ಎ) 6000 ಕೆವಿಎ ನಿಂದ 7,999 ಕೆವಿಎ;

(ಬಿ) 8000 ಕೆವಿಎ ಮತ್ತು ಮೇಲ್ಪಟ್ಟು;

6. 12 ತಿಂಗಳ ಮೀರದ ಅವಧಿಗೆ ತಾತ್ಕಾಲಿಕ ಸಗಟು ಸರಬರಾಜು;

7. ಲೈಟುಗಳು, ಪ್ಯಾನುಗಳು, ರೇಡಿಯೋ ರಿಸೀವರ್‌ಗಳು ಮತ್ತು ಇತರ ಸಣ್ಣ ಸಾಧನಗಳಿಗೆ ತಾತ್ಕಾಲಿಕ ವಿದ್ಯುತ್;

8. ತಾತ್ಕಾಲಿಕವಾಗಿ ಕೈಗಾರಿಕಾ ಉದ್ದೇಶ ಮತ್ತು ಹೀಟಿಂಗ್ ಉದ್ಧೇಶಕ್ಕಾಗಿ;

9. ಸ್ವಂತ ಬಳಕೆಗಾಗಿ ವಿದ್ಯುತ್ತನ್ನು ಉತ್ಪಾದಿಸುತ್ತಿರುವ ಅಥವಾ ಅದನ್ನು ಉಚಿತವಾಗಿ ಇತರ ವ್ಯಕ್ತಿಗಳಿಗೆ ಸರಬರಾಜು ಮಾಡುವ ಲೈಸೆನ್ಸುದಾರನಾಗಿರದ ಬಳಕೆದಾರರು;

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ರಿನ್‌ಸಿಂಗ
ಸರ್ಕಾರದ ಉಪ ಕಾರ್ಯದರ್ಶಿ
ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

**ಅಧಿಸೂಚನೆ**

**ಕ್ರಮ ಸಂಖ್ಯೆ 1**

**ಸಂಖ್ಯೆ. ಪಿಡಬ್ಲ್ಯುಡಿ 37 ಇಐಪಿ 85, ದಿನಾಂಕ 6ನೇ ಏಪ್ರಿಲ್ 1985**

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ 8ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯುಡಿ 37 ಇಐಪಿ 72, ದಿನಾಂಕ 24ನೇ ನವೆಂಬರ್ 1973ನ್ನು ರದ್ದುಗೊಳಿಸಿ ಈ ಮೂಲಕ, ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಸದರಿ ಅಧಿನಿಯಮದ ಅಡಿಯಲ್ಲಿ ಬ ಂಧಕ ವಿದ್ಯುತ್ ಉತ್ಪಾದನೆಯ ಮೇಲಿನ ವಿದ್ಯುಚ್ಛಕ್ತಿ ತೆರಿಗೆಯ ಸಂದಾಯಕ್ಕೆ ವಿನಾಯಿತಿ ನೀಡಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು**
**ಅವರ ಹೆಸರಿನಲ್ಲಿ,**

**ತುಳಸಿರಾಮಯ್ಯ**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಲೋಕೋಪಯೋಗಿ ಸಿಎಡಿ ಸಿಎಎಸ್ ಮತ್ತು ವಿದ್ಯುಚ್ಛಕ್ತಿ ಇಲಾಖೆ.**

**ಅಧಿಸೂಚನೆ**

**ಕ್ರಮ ಸಂಖ್ಯೆ 2**

**ಸಂಖ್ಯೆ. ಪಿಡಬ್ಲ್ಯುಡಿ 37 ಇಐಪಿ 85, ದಿನಾಂಕ 25ನೇ ಜೂನ್, 1985**

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ 8ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಅಧಿಸೂಚನೆ ಸಂಖ್ಯೆ ಪಿಡಬ್ಲ್ಯುಡಿ 37 ಇಐಪಿ 85, ದಿನಾಂಕ 6ನೇ ಏಪ್ರಿಲ್ 1985ನ್ನು ಭಾಗಶ: ಮಾರ್ಪಾಟು ಮಾಡಿ, ಶಾಖೋತ್ಪನ್ನ ಮತ್ತು ಡೀಸೆಲ್‌ನಿಂದ ಮಾಡಲಾಗುವ ಬಂಧಕ ವಿದ್ಯುತ್ ಉತ್ಪಾದನೆಯ ಮೇಲೆ ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ಸದರಿ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ವಿದ್ಯುಚ್ಛಕ್ತಿ ತೆರಿಗೆಯ ಸಂದಾಯಕ್ಕೆ ವಿನಾಯಿತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ತುಳಸಿರಾಮಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಸಿಎಡಿ ಸಿಎಎಸ್ ಮತ್ತು ವಿದ್ಯುಚ್ಛಕ್ತಿ ಇಲಾಖೆ.

**ಅಧಿಸೂಚನೆ**

**ಕ್ರಮ ಸಂಖ್ಯೆ 1**

**ಸಂಖ್ಯೆ. ಪಿಡಬ್ಲ್ಯುಡಿ 224 ಇಐಪಿ 85, ದಿನಾಂಕ 1ನೇ ಅಕ್ಟೋಬರ್ 1986**

**ಎಸ್‌ಓ. 1709:–** ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ III) ರ 21ನೇ ಪ್ರಕರಣದೊಂದಿಗೆ ಓದಲಾದ 1959ರ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 14)3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು,ಈ ಮೂಲಕ ಅಧಿಸೂಚನೆ ಕ್ರಮ ಸಂಖ್ಯೆ ಪಿಡಬ್ಲ್ಯುಡಿ 426 ಇಇಬಿ 84, ದಿನಾಂಕ 26ನೇ ನವೆಂಬರ್ 1984– ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಇದನ್ನು ಈ ಮುಂದಿನಂತೆ ತಿದ್ದುಪಡಿ ಮಾಡಿದೆ :–

ಕೋಷ್ಟಕದ ಕ್ರಮ ಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ :–

| | |
|---|---|
| " 7. ಉತ್ಪಾದನಾ ಕೇಂದ್ರಗಳು ಅಥವಾ ಉಪ ಕೇಂದ್ರಗಳಲ್ಲಿ (ಪೂರಕ ಬಳಕೆ) ಅಥವಾ ಅಂಥ ಉತ್ಪಾದನಾ ಕೇಂದ್ರಗಳು ಅಥವಾ ಉಪ ಆವರಣಗಳೊಳಗೆ ಇರುವ ಕಾರ್ಯಾಗಾರಗಳು ಅಥವಾ ಕಾಲೋನಿಗಳಲ್ಲಿ ತಾನು ಸ್ವತಃ ಉತ್ಪಾದಿಸಿದ ವಿದ್ಯುಚ್ಛಕ್ತಿಯನ್ನು ಬಳಸುವ ಲೈಸೆನ್ಸುದಾರ ಅಥವಾ ಇತರ ವ್ಯಕ್ತಿಗಳು". | ಒಂದು ಯೂನಿಟ್ಟಿಗೆ 5ಪೈಸೆ (ಐದು ಪೈಸೆ). |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ತುಳಸಿರಾಮಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಸಿಎಡಿ ಸಿಎಎಸ್ ಮತ್ತು ವಿದ್ಯುಚ್ಛಕ್ತಿ ಇಲಾಖೆ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿಯವರ ಭಾಗವಹಿಸುವಿಕೆ: ಖಾಸಗಿ ಉದ್ದಿಮೆದಾರರಿಗೆ ರಿಯಾಯಿತಿಗಳನ್ನು / ಪ್ರೋತ್ಸಾಹಗಳನ್ನು ಮಂಜೂರು ಮಾಡುವುದು, ಆದೇಶಗಳನ್ನು ಹೊರಡಿಸುವ ಕುರಿತು.**

**ಪ್ರಸ್ತಾವನೆ:-**

ಪ್ರಸಕ್ತ ವಿದ್ಯುತ್ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ ಮತ್ತು ಕೈಗಾರಿಕಾ ಅಭಿವೃದ್ಧಿ, ಕೃಷಿ ಮತ್ತು ಇತರ ಚಟುವಟಿಕೆಗಳನ್ನು ಪೋಷಿಸುವ ಸಲುವಾಗಿ ಮುಂಬರುವ 3-4 ವರ್ಷಗಳಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವುದನ್ನು ಖಚಿತಪಡಿಸಿಕೊಳ್ಳಲು ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರವನ್ನು ನಿವಾರಿಸಲು, ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮದ ಇತ್ತೀಚಿನ ತಿದ್ದುಪಡಿಗಳ ಅನುಕೂಲವನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಂಡು ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿಯವರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು ತುರ್ತು ಅಗತ್ಯವಾಗಿದೆ. ರಾಜ್ಯದ ವಿದ್ಯುತ್ ವಲಯದಲ್ಲಿ ಬಂಡವಾಳ ಹೂಡಲು ಖಾಸಗಿ ಉದ್ದಿಮೆದಾರರನ್ನು ಆಕರ್ಷಿಸಲು ಕೆಲವು ಪ್ರೋತ್ಸಾಹಕಗಳನ್ನು ನೀಡುವ ಅಗತ್ಯವಿದೆ ಅಲ್ಲದೆ, ವಿದ್ಯುತ್ ಸಂರಕ್ಷಣಾ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿದೆ ಮತ್ತು ಸಾಂಪ್ರದಾಯಿಕವಲ್ಲದ ವಿದ್ಯುತ್ ಮೂಲಗಳನ್ನು ಬಳಸಿಕೊಳ್ಳುವಲ್ಲಿನ ವಿಳಂಬವನ್ನು ತಪ್ಪಿಸಬೇಕಾಗಿದೆ ಹಾಗೂ ಶೀಘ್ರ ವಿಲೇವಾರಿಗಾಗಿ ಅಂತರ ಇಲಾಖಾ ಏಕಗವಾಕ್ಷಿ ಏಜೆನ್ಸಿಯನ್ನು ಸೃಜಿಸುವ ಅಗತ್ಯವಿದೆ.

**ಆದೇಶ ಸಂಖ್ಯೆ ಡಿಇ 97 ಪಿಪಿಸಿ 92, ಬೆಂಗಳೂರು, ದಿನಾಂಕ 8ನೇ ಜೂನ್ 1992**

ವಿಷಯದ ಎಲ್ಲ ಅಂಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ನಂತರ, ಮತ್ತು ವಿದ್ಯುತ್ ಉತ್ಪಾದನೆಗೆ ಅದುರಲ್ಲೂ ವಿಶೇಷವಾಗಿ ಖಾಸಗಿ ವಲಯದಲ್ಲಿ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮತ್ತು ಸಾಂಪ್ರದಾಯಿಕವಲ್ಲದ ವಿದ್ಯುತ್ ಮೂಲಗಳ ಉಪಯೋಗಕ್ಕೆ ಚಾಲನೆ ನೀಡಲು ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ:-

(1) ಮೈಸೂರು ಮತ್ತು ಹೊಸಪೇಟೆಯಲ್ಲಿರುವ ಶಾಖೋತ್ಪನ್ನ ಸ್ಥಾವರವನ್ನು ಖಾಸಗಿ ವಲಯದ ಸಹಕಾರದೊಂದಿಗೆ 500 ಮೆ.ವ್ಯಾ ಪ್ರಾರಂಭಿಕ ಸಾಮರ್ಥ್ಯದಿಂದ 1500 ಮೆ.ವ್ಯಾ. ಗೆ ವಿಸ್ತರಿಸಿ ವೃದ್ಧಿಗೊಳಿಸತಕ್ಕದ್ದು. ಖಾಸಗಿ ಪಕ್ಷಗಳು ಅವರ ಆಯ್ಕೆಯ ಮೇರೆಗೆ ಯಾವುದೇ ಇತರ ಸೂಕ್ತ ಸ್ಥಳಗಳಲ್ಲಿ ಶಾಖೋತ್ಪನ್ನ ಸ್ಥಾವರಗಳನ್ನು ಸ್ಥಾಪಿಸಲೂ ಸಹ ಅನುಮತಿಸತಕ್ಕದ್ದು.

(2) ಕ.ವಿ.ನಿ. ಸಂಸ್ಥೆಯು ಈಗಾಗಲೇ ಲಭ್ಯವಿರುವ ಮೂಲಭೂತ ಸೌಕರ್ಯಗಳ ಅನುಕೂಲತೆಯನ್ನು ಪಡೆದುಕೊಂಡು 500 ಮೆ. ವ್ಯಾ. ಸಾಮರ್ಥ್ಯದೊಂದಿಗೆ ಆರ್‌ಟಿಪಿಎಸ್ ನ Vನೇ ಘಟಕವನ್ನು ಕೈಗೆತ್ತಿಕೊಳ್ಳಲು ಅನುಮತಿಸತಕ್ಕದ್ದು. ಕ.ವಿ.ನಿ ಸಂಸ್ಥೆಯು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಅನುಮತಿ, ಕಲ್ಲಿದ್ದಲು ಸಂಪರ್ಕ

ಇತ್ಯಾದಿಗಳನ್ನು ಪಡೆಯಲು ಶೀಘ್ರವಾಗಿ ಮುಂದಿನ ಕ್ರಮ ತೆಗೆದುಕೊಳ್ಳತಕ್ಕದ್ದು ಕ.ವಿ.ನಿ ಮತ್ತು ಒಂದು ಖಾಸಗಿ ಪಕ್ಷಕಾರನ ನಡುವೆ ಜಂಟಿ ವಲಯ ಯೋಜನೆಯಂತೆ ಕೈಗೊಳ್ಳತಕ್ಕದ್ದು.

(3) ಮಂಗಳೂರಿನಲ್ಲಿ ಅಥವಾ ಅದರ ಸುತ್ತಮುತ್ತಲು ಸ್ಥಾಪನೆಯಾಗುತ್ತಿರುವ ಹಲವಾರು ಭಾರೀ ಕೈಗಾರಿಕೆಗಳ ತುರ್ತು ಅಗತ್ಯತೆಗಳನ್ನು ಭರಿಸಲು ಖಾಸಗಿ ವಲಯದಲ್ಲಿ 500 ಮೆ. ವ್ಯಾನ ಒಂದು ವಿದ್ಯುತ್ ಯೋಜನೆಯನ್ನು ವೃದ್ಧಿಗೊಳಿಸತಕ್ಕದ್ದು.

(4) ಅಪಾರವಾದ ಜಲ ಸಂಪತ್ತು ಸಾಮರ್ಥ್ಯತೆಯನ್ನು ಬಳಸಿಕೊಳ್ಳಲು ಖಾಸಗಿ ವಲಯದಲ್ಲಿ ಬೃಹತ್, ಮಧ್ಯಮ, ಸಣ್ಣ ಮತ್ತು ಅತಿ ಸಣ್ಣ ಜಲ ವಿದ್ಯುತ್ ಯೋಜನೆಗಳನ್ನು ವೃದ್ಧಿಗೊಳಿಸತಕ್ಕದ್ದು.

(5) ಈಗಿರುವ ಹಾಗೂ ಹೊಸ ಶಾಖೋತ್ಪನ, ಜಲಶಕ್ತಿ, ವಾಯುಶಕ್ತಿ, ಡೀಸಲ್, ಕೃಷಿ ತ್ಯಾಜ್ಯ ವಸ್ತುಗಳ ಆಧರಿತ ಅಥವಾ ಯಾವುದೇ ಇತರ ನಮುನೆಯ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಅನ್ವಯಿಸುವಂತೆ ವೀಲಿಂಗ್ ಮತ್ತು ಬ್ಯಾಕಿಂಗ್ ವೆಚ್ಚಗಳನ್ನು ಸಂದಾಯ ಮಾಡಿದ ನಂತರ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಟಿ ಮತ್ತು ಡಿ ವ್ಯವಸ್ಥೆಯನ್ನು ಬಳಸುವ ಮೂಲಕ ಕಾರ್ಯ ನಿರ್ವಹಿಸುವಂತಹ ಖಾಸಗಿ ವಲಯ ವಿದ್ಯುತ್ ಘಟಕಗಳಿಗೆ ವೀಲಿಂಗ್ ಮತ್ತು ಬ್ಯಾಂಕಿಂಗ್ ಯೋಜನೆಗಳ ಸೌಲಭ್ಯವನ್ನು ಅನುಮತಿಸತಕ್ಕದ್ದು.

(6) ಒಂದು ಮೆ.ವ್ಯಾ. ವರೆಗಿನ ಸಣ್ಣ ಮತ್ತು ಅತಿ ಸಣ್ಣ ಜಲವಿದ್ಯುತ್‌ಯೋಜನೆಗಳ ಸಂಬಂಧದಲ್ಲಿ ಹಾಗೂ ವಾಯು ಮತ್ತು ಸೌರವಿದ್ಯುತ್ ಯೋಜನೆಗಳ ಸಂಬಂಧದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸಂದಾಯ ಮಾಡಬೇಕಾಗಿರುವ ವೀಲಿಂಗ್ ಮತ್ತು ಬ್ಯಾಂಕಿಂಗ್ ವೆಚ್ಚಗಳು, ಉತ್ಪಾದಿಸಿದ ಮತ್ತು ಪ್ರಸರಣ ಮಾಡಿದ ವಿದ್ಯುತ್ತಿನ ಶೇ.2 ರಷ್ಟು ಇರತಕ್ಕದ್ದು. 1 ಮತ್ತು 3 ಮೆ.ವ್ಯಾ ನಡುವಿನ ಉತ್ಪಾದನಾ ಸಾಮರ್ಥ್ಯದ ಸಣ್ಣ/ ಅತಿ ಸಣ್ಣ ಜಲವಿದ್ಯುತ್ ಯೋಜನೆಗಳ ಸಂಬಂಧದಲ್ಲಿ ವೀಲಿಂಗ್ ಮತ್ತು ಬ್ಯಾಂಕಿಂಗ್ ವೆಚ್ಚಗಳು ಉತ್ಪಾದಿಸಿದ ಮತ್ತು ಪ್ರಸರಣ ಮಾಡಿದ ವಿದ್ಯುತ್ತಿನ ಶೇ.5 ಆಗಿರತಕ್ಕದ್ದು. ಇತರ ಸಂದರ್ಭಗಳಲ್ಲಿ ವೀಲಿಂಗ್ ಮತ್ತು ಬ್ಯಾಂಕಿಂಗ್ ವೆಚ್ಚಗಳು ವಿದ್ಯುಚ್ಛಕ್ತಿ ಮತ್ತು ಪ್ರಸರಣ ಮಾಡಿದ ವಿದ್ಯುತ್ತಿನ ಶೇ. 10ಕ್ಕೆ ನಿಗದಿಪಡಿಸತಕ್ಕದ್ದು.

(7) ಕೈಗಾರಿಕಾ ಘಟಕಗಳಿಂದ ಸ್ಥಾಪಿಸಲಾಗಿರುವ ಬಂಧಕ ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಗಳಿಗೆ ಪ್ರೋತ್ಸಾಹಕಗಳನ್ನು ನೀಡಲು, ಅಂಥ ಘಟಕಗಳಿಗೆ 5 ವರ್ಷಗಳ ಅವಧಿಗೆ ಎಲ್ ಎಸ್ ಹೆಚ್ ಎಸ್ ಮತ್ತು ಕುಲುಮೆ ಎಣ್ಣೆಯ ಮೇಲಿನ ಮಾರಾಟ ತೆರಿಗೆಯನ್ನು ತುಂಬಿಕೊಡತಕ್ಕದ್ದು. ಈ ಸೌಲಭ್ಯವು ಬಂಧಕ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ ಹೊಸ ಕೈಗಾರಿಕಾ ಘಟಕಗಳಿಗೆ ಮಾತ್ರ ದೊರೆಯತಕ್ಕದ್ದು. ಹಾಲಿ ಇರುವ ಕೈಗಾರಿಕಾ ಘಟಕಗಳ ಸಂದರ್ಭದಲ್ಲಿ ಬಂಧಕ ವಿದ್ಯುತ್ ಉತ್ಪಾದನಾ ಘಟಕಗಳಿಂದ ಬಳಸಲಾದ ಡೀಸೆಲ್‌ನ ಮೇಲೆ ಅಂಥ ಬಂಧಕ ವಿದ್ಯುತ್ ಘಟಕಗಳ ಸ್ಥಾಪನೆಯ ದಿನಾಂಕದಿಂದ 5 ವರ್ಷಗಳವರೆಗೆ ಮಾತ್ರ ಮಾರಾಟ ತೆರಿಗೆಯನ್ನು ತುಂಬಿಕೊಡಲು ಅನುಮತಿಸತಕ್ಕದ್ದು.

(8) ರಾಜ್ಯದಲ್ಲಿ ಹೊಸದಾಗಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಖಾಸಗಿ ಉದ್ದಿಮೆದಾರರಿಗೆ ಈಗ ನೀಡುತ್ತಿರುವ ಪ್ರೋತ್ಸಾಹಕ ವ್ಯವಸ್ಥೆಯನ್ನು, ಆ ಪ್ರೋತ್ಸಾಹಕಗಳ ವಿಸ್ತರಣೆಯ ಉದ್ದೇಶಕ್ಕಾಗಿ ಖಾಸಗಿ

ಉದ್ದಿಮೆದಾರರು ಸ್ಥಾಪಿಸುವ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗಾರಿಕೆಗಳ ಹೊಸ ಘಟಕಗಳೆಂದು ಪರಿಗಣಿಸಿ ಅವರಿಗೂ ಸಹ ವಿಸ್ತರಿಸತಕ್ಕದ್ದು.

(9) ಹೊಸ ಕೈಗಾರಿಕಾ ಘಟಕಗಳು ಸ್ಥಾಪಿಸುವ ಬಂಧಕ ವಿದ್ಯುತ್ ಉತ್ಪಾದನಾ ಘಟಕಗಳ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಕಷ್ಟು ಪ್ರೋತ್ಸಾಹಗಳನ್ನು ನೀಡುವ ಸಲುವಾಗಿ ಹೊಸ ಕೈಗಾರಿಕಾ ಘಟಕಗಳ ಸಂದರ್ಭದಲ್ಲಿ ಐದು ವರ್ಷಗಳ ಅವಧಿಗೆ ಸ್ವಂತ ಬಳಕೆಗಾಗಿ ಉತ್ಪಾದಿಸುವ ವಿದ್ಯುಚ್ಛಕ್ತಿ ತೆರಿಗೆಯನ್ನು ವಿನಾಯಿತಿಗೊಳಿಸತಕ್ಕದ್ದು.

(10) ಇನ್ನು ಮುಂದೆ, ಭಾರಿ ಜಲ ವಿದ್ಯುತ್ ಯೋಜನೆಗಳಲ್ಲಿ ಖಾಸಗಿಯವರು ಭಾಗವಹಿಸುವುದಕ್ಕೆ ಪೂರ್ಣಾವಕಾಶವನ್ನು ಅನುಮತಿಸತಕ್ಕದ್ದು. ಅಂಥ ಯೋಜನೆಗಳನ್ನು ಖಾಸಗಿ ವಲಯಗಳಿಗೆ ಅಥವಾ ಕ.ವಿ.ನಿ. ಸಂಸ್ಥೆಯೊಂದಿಗಿನ ಜಂಟಿ ವಲಯದ ಉದ್ಯಮಗಳಿಗೆ ಪ್ರತ್ಯೇಕವಾಗಿ ಅನುಮತಿಸತಕ್ಕದ್ದು. ಅಂಥ ಯೋಜನೆಗಳನ್ನು 30 ವರ್ಷಗಳ ಅವಧಿಯ, ಸರ್ಕಾರದ ವಿವೇಚನೆಯ ಮೇರೆಗೆ ಮತ್ತೆ 20 ವರ್ಷಗಳಿಗೆ ವಿಸ್ತರಿಸಬಹುದಾದ ದೀರ್ಘ ಗುತ್ತಿಗೆಯ ಆಧಾರದ ಮೇಲೆ ಅನುಮತಿಸತಕ್ಕದ್ದು. ವಿದ್ಯುತ್ ಉತ್ಪಾದನೆಗಾಗಿ ಬಳಸಲಾಗುವ ನೀರಿನ ಸ್ವಾಮ್ಯ ಶುಲ್ಕವನ್ನು ರಾಜ್ಯ ಸರ್ಕಾರವು ನಿಗದಿಪಡಿಸತಕ್ಕದ್ದು ಮತ್ತು ನಿಯತಕಾಲಿಕ ಅಂತರಗಳಲ್ಲಿ ಅದನ್ನು ಪರಿಷ್ಕರಿಸತಕ್ಕದ್ದು. ವೀಲಿಂಗ್ ಮತ್ತು ಬ್ಯಾಕಿಂಗ್ ಸೌಲಭ್ಯವನ್ನು ಖಾಸಗಿ ಅಥವಾ ಜಂಟಿ ಉದ್ಯಮ ವಲಯದ ಪಕ್ಷಕಾರರು ಕೈಗೊಳ್ಳುವಂಥ ವಿದ್ಯುತ್ ಯೋಜನೆಗಳಿಗೂ ಸಹ ಅನುಮತಿಸತಕ್ಕದ್ದು.

(11) ಸೋಲಾರ್ ವಾಟರ್ ಹೀಟರ್‌ಗಳ ಬಳಕೆಯನ್ನು ವಿಶೇಷವಾಗಿ ಕೈಗಾರಿಕಾ, ವಾಣಿಜ್ಯ ಮತ್ತು ಗೃಹಸಂಬಂಧಿ ವಲಯಗಳಲ್ಲಿ ಪ್ರೋತ್ಸಾಹಿಸತಕ್ಕದ್ದು ಅಂಥ ವಿದ್ಯುತ್ ಸಂರಕ್ಷಣಾ ಕ್ರಮಗಳನ್ನು ಉತ್ತೇಜಿಸಲು ರಾಜ್ಯ ಸಹಾಯಧನವನ್ನು ಸಹ ಮಂಜೂರು ಮಾಡತಕ್ಕದ್ದು.

(12) ಸರ್ಕಾರದ ವಿವಿಧ ಇಲಾಖೆಗಳಿಂದ ಒಪ್ಪಿಗೆ ನೀಡಿಕೆಯನ್ನು ತ್ವರಿತಗೊಳಿಸಲು ಮತ್ತು ಸರಿಯಾದ ಸಮನ್ವಯವನ್ನು ಸಾಧಿಸಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸತಕ್ಕದ್ದು. ಅದಕ್ಕೆ ಸರ್ಕಾರದ ಹಣಕಾಸು, ಇಂಧನ, ಕೈಗಾರಿಕೆ, ಕಂದಾಯ, ಅರಣ್ಯ ಮತ್ತು ಪರಿಸರ ಇಲಾಖೆಗಳ ಕಾರ್ಯದರ್ಶಿಗಳು, ಕ.ವಿ. ನಿಗಮ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಕ.ವಿ. ಮಂಡಲಿಯ ಅಧ್ಯಕ್ಷರು ಸದಸ್ಯರಾಗಿರತಕ್ಕದ್ದು. ಈ ಸಮಿತಿಯು ರಾಜ್ಯ ಮಟ್ಟದಲ್ಲಿ ವಿದ್ಯುತ್ ಯೋಜನೆಗಳ ಒಪ್ಪಿಗೆ ನೀಡಿಕೆಗೆ ಏಕಗವಾಕ್ಷಿ ಏಜೆನ್ಸಿಯಾಗಿ ಸೇವೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ. ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 54 ಬಿಜಿಎಲ್ 92, ದಿನಾಂಕ 19.5. 1992.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಡಿ. ಪುಟ್ಟಸ್ವಾಮಿ
ಸರ್ಕಾರದ ಜಂಟಿ ಕಾರ್ಯದರ್ಶಿ,
ಇಂಧನ ಇಲಾಖೆ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿಯವರ ಭಾಗವಹಿಸುವಿಕೆ, ಖಾಸಗಿ ಉದ್ಯಮದಾರರಿಗೆ ರಿಯಾಯಿತಿಗಳ / ಪ್ರೋತ್ಸಾಹಕಗಳ ಮಂಜೂರಾತಿ ಕುರಿತು.**

**ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯುಡಿ 76 ಇಐಪಿ 85, ದಿನಾಂಕ 30.10.1985.**

**2. ಸರ್ಕಾರಿ ಆದೇಶ ಸಂಖ್ಯೆ ಡಿಇ 97 ಪಿಪಿಸಿ 92, ದಿನಾಂಕ 8.6.1992.**

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬಂಧಕ ವಿದ್ಯುತ್ ಉತ್ಪಾದನಾ ಘಟಕಗಳಿಂದ ಬಳಸಲಾದ ಡೀಸೆಲ್ ಮೇಲೆ ಮಾರಾಟ ತೆರಿಗೆಯ ವಿನಾಯಿತಿಯನ್ನು ಯಾವುದೇ ಸಮಯ ಮಿತಿಯಿಲ್ಲದೆ ನೀಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬಂಧಕ ವಿದ್ಯುತ್ ಉತ್ಪಾದನೆಗೆ ಬಳಸಲಾದ ಎಲ್‌ಎಸ್‌ಎಚ್‌ಎಸ್ ಮೇಲಿನ ಮತ್ತು ಕುಲುಮೆ ಎಣ್ಣೆಯ ಮೇಲಿನ ಮಾರಾಟ ತೆರಿಗೆಯನ್ನು ತುಂಬಿ ಕೊಡುವುದನ್ನು ಐದು ವರ್ಷಗಳ ಅವಧಿಗೆ ಸೀಮಿತಗೊಳಿಸಲಾಗಿದೆ. ಈ ಆದೇಶದ ಉದ್ದೇಶವು ರಿಯಾಯಿತಿಯ ಅವಧಿಯನ್ನು ಐದು ವರ್ಷಗಳಿಗೆ ಸೀಮಿತಗೊಳಿಸಬೇಕೆಂದಿದ್ದು, ಹಿಂದಿನ ಆದೇಶದ ಉಪಬಂಧವನ್ನು ಮುಂದುವರಿಸಿದಲ್ಲಿ ಸಂದಿಗ್ಧ ಪರಿಸ್ಥಿತಿಯುಂಟಾಗುವುದು. ಅಲ್ಲದೆ ಸದರಿ ಆದೇಶದಲ್ಲಿ ಬಂಧಕ ವಿದ್ಯುತ್ ಉತ್ಪಾದನೆಯಲ್ಲಿ ಬಳಸಲಾದ ಡಿಸೇಲ್ ಮೇಲಿನ ಮಾರಾಟ ತೆರಿಗೆಯನ್ನು ತುಂಬಿಕೊಡುವುದನ್ನು ಸೇರಿಸಿರುವುದಿಲ್ಲ ಮತ್ತು ಅದನ್ನು ಅಗತ್ಯವಾಗಿ ಸೇರಿಸಬೇಕಾಗಿ ಬಂದಿದೆ. ಆದ್ದರಿಂದ ಈ ಆದೇಶ.

1. ಸರ್ಕಾರದ ಆದೇಶ ಸಂಖ್ಯೆ: ಡಿಇ 97 ಪಿಪಿಸಿ 92, ಬೆಂಗಳೂರು, ದಿನಾಂಕ: 20.04.1993.

ಮೇಲೆ (1) ರಲ್ಲಿ ಓದಲಾದ ದಿನಾಂಕ 8.6.1992ರ ಆದೇಶವನ್ನು ಭಾಗಶಃ ಮಾರ್ಪಾಡು ಮಾಡಿ ಸರ್ಕಾರವು ಈ ಮುಂದಿನ ಆದೇಶಗಳನ್ನು ರಚಿಸುತ್ತದೆ:

(1) ಮೇಲೆ (1)ರಲ್ಲಿ ಓದಲಾದ ಆದೇಶ ಸಂಖ್ಯೆ: ದಿನಾಂಕ:30.10.1985ನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(2) ಮೇಲೆ (2)ರಲ್ಲಿ ಓದಲಾದ ದಿನಾಂಕ 8.6.1992ರ ಆದೇಶದ 1ನೇ ಪ್ಯಾರಾದ 7ನೇ ಬಾಬಿನ ಅಡಿಯಲ್ಲಿ "ಎಲ್‌ಎಸ್‌ಹೆಚ್‌ಎಸ್ ಮೇಲಿನ ತೆರಿಗೆ" ಎಂಬ ಪದಗಳಿಗೆ "ಡೀಸಲ್ ಮತ್ತು ಎಲ್.ಎಸ್.ಹೆಚ್.ಎಸ್' ಮೇಲಿನ ತೆರಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ದಿನಾಂಕ 8ನೇ ಜೂನ್ 1992 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ. ನೋಡಿ: ಯು.ಒ.ಟಿಪ್ಪಣಿ ಎಫ್ ಡಿ 164 ಡಿಎಸ್– III ದಿನಾಂಕ 7.4.93.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಎಂ. ಚಂದ್ರಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

**ಅಧಿಸೂಚನೆ**

**ಸಂಖ್ಯೆ. ಡಿಇ 210 ಇಇಪಿ 85, ದಿನಾಂಕ 18 ಜೂನ್ 1997**

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲೆ ತೆರಿಗೆ ನಿರ್ಧರಣೆ) ಅಧಿನಿಯಮ, 1959ರ 8ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ಅಧಿಸೂಚನೆ ಸಂಖ್ಯೆ [1][ಪಿಡಬ್ಲ್ಯುಡಿ 87 ಇಐಪಿ 85][1] ದಿನಾಂಕ 6.4.1985 ಮತ್ತು 25.6.1985 ಅಥವಾ ಈ ವಿಷಯದ ಬಗೆಗಿನ ಯಾವುದೇ ಇತರ ಅಧಿಸೂಚನೆಯನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು, 1ನೇ ಜುಲೈ 1996 ರಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶಗಳವರೆಗೆ ಬಂಧಕ ವಿದ್ಯುತ್ (ಸ್ವಂತ ಬಳಕೆ) ಉತ್ಪಾದನೆಯ ಮೇಲೆ ಸದರಿ ಅಧಿನಿಯಮದ ಅಡಿಯಲ್ಲಿ ಬ ಂಧಕ ವಿದ್ಯುತ್ ಉತ್ಪಾದನೆಯ ಮೇಲಿನ ವಿದ್ಯುಚ್ಛಕ್ತಿ ತೆರಿಗೆಯ ಸಂದಾಯಕ್ಕೆ ವಿನಾಯಿತಿಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಅಹ್ಮದ್ ಎ. ಮೊಕ್ತದಾರ್
ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

**ಅಧಿಸೂಚನೆ**

**ಸಂಖ್ಯೆ. ಡಿಇ 210 ಇಇಪಿ 85, ದಿನಾಂಕ 26 ಜೂನ್ 1997**

ಅಧಿಸೂಚನೆ ಸಂಖ್ಯೆ ಡಿಇ 210 ಇಇಬಿ 95, ದಿನಾಂಕ 18.6.1997ರಲ್ಲಿ, ನಾಲ್ಕನೇ ಸಾಲಿನಲ್ಲಿ" ಪಿಡಬ್ಲ್ಯೂಡಿ 87 ಇಐಪಿ 85" ಎಂಬ ಪದಗಳನ್ನು " ಪಿಡಬ್ಲ್ಯೂಡಿ 37 ಇಐಪಿ 85" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಅಹ್ಮದ್ ಎ. ಮೊಕ್ತದಾರ್
ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ.

1. ಸಂ. "ಪಿಡಬ್ಲ್ಯೂಡಿ 87 ಇಐಪಿ 85ನ್ನು ಸಂಖ್ಯೆ ಪಿಡಬ್ಲ್ಯೂಡಿ 37 ಇಐಪಿ 85 ಎಂದು ತಿದ್ದಲಾಗಿದೆ. ತಿದ್ದೋಲೆ ಸಂಖ್ಯೆ ಡಿ.ಇ. 210 ಇ ದಿನಾಂಕ 26.6.1997ನ್ನು ನೋಡಿ.

The above translation of the Karnataka Electricity (Taxation on Consumption) Act, 1959 and The Karnataka Electricity (Taxation on Consumption) Rules, 1959 shall be authoritative text in the Kannada Language under section 5A of the Karnataka Official Language Act, 1963.

Governor of Karnataka

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಪಿ.ಆರ್. 33**

ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.